ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮಾರ್ಚ್ 13, 2021

ಸಂಪುಟ : 47 ಸಂಚಿಕೆ : 313 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



**ಮಾರ್ಕಂಡೇಶ್ವರ ಮೆರವಣಿಗೆ** ಮಹಾಶಿವರಾತ್ರಿ ಅಂಗವಾಗಿ ದಾವಣಗೆರೆ ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ಸ್ವಾಮಿ ಮೆರವಣಿಗೆ ನಡೆಯಿತು. ಭಕ್ತ ಮಾರ್ಕಂಡೇಯ, ಶಿವನ ಪಾತ್ರಗಳು ಗಮನ ಸೆಳೆದವು.

# ರಾಜ್ಯಕ್ಕೆ ಎರಡನೇ ಅಲೆ ಎಚ್ಚರಿಕೆ

## ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಸರ್ಕಾರದ ಎಚ್ಚರಿಕೆ

ಬೆಂಗಳೂರು, ಮಾ. 12 - ಮಹಾರಾಷ್ಟ್ರ, ಕೇರಳ ಗಡಿ ಭಾಗಗಳಲ್ಲಿ ಬಿಗಿ ಕ್ರಮ ಕೈಗೊಂಡು ಸಾರ್ವಜನಿಕ ಸಭೆ, ಸಮಾರಂಭ ಮತ್ತು ಮಾರುಕಟ್ಟೆಗಳಲ್ಲಿ ಜನಸಂದಣೆ ಸೇರದಂತೆ ಎಚ್ಚರ ವಹಿಸದಿದ್ದರೆ, ರಾಜ್ಯದಲ್ಲೂ ಕೊರೊನಾ ಎರಡನೇ ಅಲೆ ಸಾಧ್ಯತೆ ಇದೆ ಎಂದು ತಜ್ಞರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ದಿನದಿಂದ ದಿನಕ್ಕೆ ಮಹಾರಾಷ್ಟ್ರದಲ್ಲಿ ಸೋಂಕಿತರ ಪ್ರಮಾಣ ಮಿತಿ ಮೀರುತ್ತಿದೆ. ಕೇರಳ ಮತ್ತು ಮಹಾರಾಷ್ಟ್ರ ಗಡಿಗಳಿಂದ ದಿನನಿತ್ಯ ಸಾವಿರಾರು ಮಂದಿ ರಾಜ್ಯವನ್ನು ಪ್ರವೇಶ ಮಾಡುತ್ತಿದ್ದಾರೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಕೊರೊನಾ ಲಸಿಕೆ ಬಂದಿದೆ ಎಂದು ಜನ ಮೈಮರೆತಂತಿದ್ದಾರೆ. ಕೇಂದ್ರ ಸರ್ಕಾರದ ಸಲಹೆ, ಸೂಚನೆಗಳನ್ನು ಪಾಲನೆ ಮಾಡುತ್ತಿಲ್ಲ. ಮದುವೆ ಮತ್ತು ಇತರೆ ಸಮಾರಂಭಗಳು ಸೇರಿದಂತೆ ಜನಗಳ ಜಾತ್ರೆಯಾಗುತ್ತಿದೆ.

ಮಾರುಕಟ್ಟೆಗಳಲ್ಲೂ ನಿಯಮ ಪಾಲಿಸುತ್ತಿಲ್ಲ. ತಡರಾತ್ರಿ ನಡೆಯುವ ಪಾರ್ಟಿಗಳ ಮೇಲೂ ನಿಗಾವಹಿಸಿ, ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳದಿದ್ದರೆ, ಮತ್ತೆ ರಾಜ್ಯದಲ್ಲಿ ಕೊರೊನಾ ವ್ಯಾಪಕವಾಗಿ ಅಪ್ಪಳಿಸಬಹುದು.

ಕಚೇರಿಗಳು, ಶಾಲಾ-ಕಾಲೇಜುಗಳು ಮತ್ತು ವಿವಿಧಡೆ ಈ ಹಿಂದಿನ ಕಟ್ಟುನಿಟ್ಟಿನ ಕ್ರಮ ಅನುಸರಿಸಿ, ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಲಿ ಎಂದು ತಿಳಿಸಿದೆ. ಕಳೆದ ಬಾರಿ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಹಾಗೂ ಗುಜರಾತ್, ದೆಹಲಿಯಿಂದ ಬಂದವರಿಂದ ರಾಜ್ಯದಲ್ಲಿ ಕೊರೊನಾ ವ್ಯಾಪಕವಾಗಿ ಹರಡಿತ್ತು. ಇಂತಹ ಪರಿಸ್ಥಿತಿ ಮರುಕಳಿಸದಂತೆ ಎಚ್ಚರ ವಹಿಸಬೇಕಾಗಿದೆ. ಅಷ್ಟೇ ಅಲ್ಲ, ಮುಂಜಾಗ್ರತಾ ಕ್ರಮವಾಗಿ ಸೋಂಕಿತರಿಗೆ ಚಿಕಿತ್ಸೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಒಳಿತು ಎಂದು ಹೇಳಿದೆ.

ಕಳೆದ ನವೆಂಬರ್ ತಿಂಗಳಿನಿಂದ ಫೆಬ್ರವರಿವರೆಗೂ ರಾಜ್ಯದಲ್ಲಿ ಸೋಂಕಿನ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿತ್ತು. ಆದರೆ, ಮಾರ್ಚ್ ತಿಂಗಳಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ (2ನೇ ಪುಟಕ್ಕೆ)

### ಆರು ದಿನದಲ್ಲಿ ಲಕ್ಷ ಸೋಂಕು

**ನವದೆಹಲಿ ಮಾ. 12 – ಕಳೆದ ಆರು ದಿನಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕೊರೊನಾ ವೈರಸ್ ಪ್ರಕರಣಗಳು ಕಂಡು ಬಂದಿವೆ. ಶುಕ್ರವಾರ ಒಂದೇ ದಿನ 23,285 ಸೋಂಕುಗಳು ಕಂಡು ಬಂದಿವೆ. ಇದು ಕಳೆದ 78 ದಿನಗಳಲ್ಲಿ ಕಂಡು ಬಂದ ಅತಿ ಹೆಚ್ಚು ಸೋಂಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.**

**ದೇಶದಲ್ಲಿ ಸಕ್ರಿಯ ಸೋಂಕುಗಳ ಪ್ರಮಾಣ 1.97 ಲಕ್ಷಕ್ಕೆ ಏರಿಕೆಯಾಗಿದೆ. ಶುಕ್ರವಾರ ಒಂದೇ ದಿನ 117 ಜನ ಸಾವನ್ನಪ್ಪಿದ್ದಾರೆ. ಈ ಹಿಂದೆ ಡಿಸೆಂಬರ್ 24ರಂದು ಒಂದೇ ದಿನ 24,712 ಸೋಂಕುಗಳು ಕಂಡು ಬಂದಿದ್ದವು.**

## ಕೊರೊನಾ : ಮದುವೆ ಛತ್ರಕ್ಕೆ 200, ಅಂತ್ಯಕ್ರಿಯೆಗೆ 50 ಜನ ಮಾತ್ರ

### ಬಹಿರಂಗ ಸಮಾರಂಭಕ್ಕೆ 500 ಜನರಿಗೆ ನಿರ್ಬಂಧ

ಬೆಂಗಳೂರು, ಮಾ. 12 – ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮದುವೆ ಮತ್ತಿತರೆ ಸಭೆ - ಸಮಾರಂಭಗಳ ಮೇಲೆ ನಿರ್ಬಂಧ ಹೇರಲಾಗಿದೆ. ಛತ್ರಗಳಲ್ಲಿ ನಡೆಯುವ ಮದುವೆಗಳಿಗೆ ಇನ್ನು ಮುಂದೆ ಕೇವಲ 200 ಜನರಿಗೆ ಮಾತ್ರ ಅವಕಾಶ ನೀಡಲಾಗುವುದು.

ನೂತನ ನಿಯಮಗಳ ಅನ್ವಯ ಮದುವೆಗಳು ಬಯಲು ಪ್ರದೇಶಗಳಲ್ಲಿ ನಡೆದರೆ 500 ಜನರಿಗೆ ಅವಕಾಶ ಇರಲಿದೆ. ಛತ್ರದಲ್ಲಿ ಇಲ್ಲವೇ ನಾಲ್ಕು ಗೋಡೆಗಳ ನಡುವಿನ ಪ್ರದೇಶಗಳಲ್ಲಿ ನಡೆದರೆ 200 ಜನರಿಗೆ ಮಾತ್ರ ಅವಕಾಶ ನೀಡಲಾಗುವುದು.

ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೀದ್ ಅಖ್ತರ್ ಅವರು ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದಾರೆ. ಕೊರೊನಾ ಎರಡನೇ ಅಲೆಯ ಭೀತಿಯ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಜನ್ಮದಿನಾಚರಣೆ ಬಯಲು ಪ್ರದೇಶದಲ್ಲಿ ನಡೆದರೆ 100 ಜನರಿಗೆ ಹಾಗೂ ಕಟ್ಟಡಗಳ ಒಳಗೆ ನಡೆದರೆ 50 ಜನರಿಗೆ ಅವಕಾಶ ಇರಲಿದೆ. ಅಂತ್ಯಕ್ರಿಯೆಗಳಲ್ಲಿ 50 ಜನರು ಮಾತ್ರ ಪಾಲ್ಗೊಳ್ಳಬಹುದು. ಧಾರ್ಮಿಕ ಹಾಗೂ ರಾಜಕೀಯ ಸಮಾರಂಭಗಳು ಬಯಲು ಪ್ರದೇಶದಲ್ಲಿ ನಡೆದರೆ 500 ಜನರಿಗೆ ಅವಕಾಶ ಇರಲಿದೆ. ಕೊರೊನಾ ಸೋಂಕು ತ್ವರಿತ ಪತ್ತೆಗಾಗಿ ಪರೀಕ್ಷೆ ಹೆಚ್ಚಿಸಲೂ ಸಹ ನಿರ್ಧರಿಸಲಾಗಿದೆ. ಅದರಂತೆ ಬೆಳಗಾವಿಯಲ್ಲಿ ಪ್ರತಿದಿನ 4,000, ಬೆಂಗಳೂರಿಗೆ 40 ಸಾವಿರ, ದಕ್ಷಿಣ ಕನ್ನಡಕ್ಕೆ 3 ಸಾವಿರ ಹಾಗೂ ಮೈಸೂರಿಗೆ 3 ಸಾವಿರ ಪರೀಕ್ಷೆಗಳ ಗುರಿ ನೀಡಲಾಗಿದೆ.

## ಸಿ.ಡಿ. ಪ್ರಕರಣ: ಐವರು ಎಸ್.ಐ.ಟಿ. ವಶಕ್ಕೆ

ಬೆಂಗಳೂರು, ಮಾ. 12 - ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರ ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ(ಎಸ್‌ಐಟಿ) ಶಂಕಿತ ಐವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ.

ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿಗೆ ಸಿ.ಡಿ. ನೀಡಿದ ಆರೋಪದಡಿ ಓರ್ವ ಯುವಕನನ್ನು ಸಿಐಡಿ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಎಸ್.ಐ.ಟಿ ಮೂಲಗಳು ತಿಳಿಸಿವೆ.

ಐವರ ದೂರವಾಣಿ ಕರೆ ಆಧಾರದ ಮೇಲೆ ಬೆಂಗಳೂರಿನ ಯಶವಂತಪುರದ ಓರ್ವ, ಚಾಮರಾಜ ಪೇಟೆಯಲ್ಲಿ ಒಬ್ಬ, ವಿಜಯನಗರದಲ್ಲಿ ರೂಮ್ ಮಾಡಿಕೊಂಡಿದ್ದ ಓರ್ವ ಹಾಗೂ (2ನೇ ಪುಟಕ್ಕೆ)

## ಚಿಲ್ಲರೆ ಹಣದುಬ್ಬರ ಶೇ.5.03ಕ್ಕೆ ಏರಿಕೆ

ನವದೆಹಲಿ, ಮಾ. 12 – ಫೆಬ್ರವರಿಯಲ್ಲಿ ಚಿಲ್ಲರೆ ಹಣದುಬ್ಬರ ಶೇ.5.03ಕ್ಕೆ ಏರಿಕೆಯಾಗಿದೆ. ಆಹಾರ ಬೆಲೆ ಏರಿಕೆ ಇದಕ್ಕೆ ಪ್ರಮುಖ ಕಾರಣ ಎಂದು ಸರ್ಕಾರಿ ಅಂಕಿ -ಅಂಶಗಳು ತಿಳಿಸಿವೆ. ಗ್ರಾಹಕರ ಬೆಲೆ ಸೂಚ್ಯಂಕ ಆಧರಿತ ಚಿಲ್ಲರೆ ಹಣದುಬ್ಬರ ಜನವರಿಯಲ್ಲಿ ಶೇ.4.06ರಷ್ಟಿತ್ತು.

## ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಚಾಲನೆ ನೀಡಿದ ಪ್ರಧಾನಿ ಮೋದಿ

ಅಹಮದಾಬಾದ್, ಮಾ. 12 – ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ತುಂಬಿರುವುದರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಆಯೋಜಿಸಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ.

ಮಹೋತ್ಸವಗಳು ಆಗಸ್ಟ್ 15, 2023ರವರೆಗೆ ಮುಂದುವರೆಯಲಿವೆ ಎಂದಿರುವ ಪ್ರಧಾನಿ, ಎಲೆಮರೆ ಕಾಯಿಯಂತಿರುವ ಸ್ವಾತಂತ್ರ್ಯ ಯೋಧರ ಇತಿಹಾಸ ರಕ್ಷಣೆಗೆ ಕಳೆದ ಆರು ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆ ಎಂದಿದ್ದಾರೆ.

ಮಹಾತ್ಮ ಗಾಂಧಿ ಅವರ ದಂಡಿ ಯಾತ್ರೆ ಸ್ಮರಿಸಲು ಸಾಬರಮತಿ ಆಶ್ರಮದಿಂದ ನಡೆಸಲಾಗುವ ಪಾದಯಾತ್ರೆಗೂ ಪ್ರಧಾನಿ ಚಾಲನೆ ನೀಡಿದ್ದಾರೆ.

ಅಹಮದಾಬಾದ್‌ನಲ್ಲಿರುವ ಸಾಬರಮತಿ ಆಶ್ರಮದಿಂದ 81 ಜನರು ನವಾಸರಿಯಲ್ಲಿರುವ ದಂಡಿಗೆ ಪಾದಯಾತ್ರೆ ಕೈಗೊಂಡಿದ್ದಾರೆ. ಯಾತ್ರೆ 386 ಕಿ.ಮೀ. ಉದ್ದದ್ದಾಗಿದ್ದು, 25 ದಿನಗಳ ನಂತರ ಏಪ್ರಿಲ್ 5ರಂದು ಪೂರ್ಣಗೊಳ್ಳಲಿದೆ.

ಮಾರ್ಚ್ 12, 1930ರಂದು ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ 78 ಜನರು ದಂಡಿ ಯಾತ್ರೆಯನ್ನು



ಸಾಬರಮತಿ ಆಶ್ರಮದಿಂದ ಕೈಗೊಂಡಿದ್ದರು. ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆ ಹೇರಿದ್ದನ್ನು ವಿರೋಧಿಸಿ ಈ ಸತ್ಯಾಗ್ರಹ ಕೈಗೊಳ್ಳಲಾಗಿತ್ತು. ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ದಂಡಿ ಯಾತ್ರೆ ಮಹತ್ವ ಪಡೆದುಕೊಂಡಿದೆ.

ಕಳೆದ ಆರು ವರ್ಷಗಳಲ್ಲಿ ಸ್ವಾತಂತ್ರ್ಯ ಯೋಧರ ಇತಿಹಾಸ ರಕ್ಷಣೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿ, ದಂಡಿ ಯಾತ್ರೆಗೆ ಸಂಬಂಧಿಸಿದ ಪ್ರಮುಖ ಸ್ಥಳಗಳ ಪುನರ್‌ನಿರ್ಮಾಣವನ್ನು ಎರಡು ವರ್ಷಗಳ ಹಿಂದೆ ಪೂರ್ಣಗೊಳಿಸಲಾಗಿದೆ. ದೇಶದ ಪ್ರಥಮ ಸ್ವತಂತ್ರ ಸರ್ಕಾರ ಸ್ಥಾಪಿಸಿದ ನಂತರ ಅಂಡಮಾನ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ತ್ರಿವರ್ಣ ಧ್ವಜ ಹಾರಿಸಿದ ಸ್ಥಳವನ್ನು ನವೀಕರಿಸಲಾಗಿದೆ ಎಂದು ತಿಳಿಸಿದ್ದಾರೆ. (2ನೇ ಪುಟಕ್ಕೆ)

## ಮುಂಜಾಗ್ರತೆಗಾಗಿ ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ನಿರ್ಣಯ

### ತಾಲ್ಲೂಕು ಟಾಸ್ಕ್‌ಫೋರ್ಸ್ ಸಭೆಯಲ್ಲಿ ನಿರ್ಧಾರ

ದಾವಣಗೆರೆ, ಮಾ. 12- ಮುಂಜಾಗ್ರತಾ ಕ್ರಮವಾಗಿ ತಾಲ್ಲೂಕಿನಲ್ಲಿ ಕೋವಿಡ್ ಪರೀಕ್ಷಾ ಸಂಖ್ಯೆಯನ್ನು ಹೆಚ್ಚಿಸಲು ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿ ಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ತಾಲ್ಲೂಕು ತಹಸೀಲ್ದಾರ್ ಕಚೇರಿಯಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಭಾಗವಹಿಸಿ ಮಾತಾಡಿದ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಎಲ್.ಡಿ. ಅವರು, ಈಗಾಗಲೇ ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಕೋವಿಡ್‌ನ ಹೆಚ್ಚು ಪ್ರಕರಣಗಳು ಕಂಡು ಬರುತ್ತಿದ್ದು, ಹೊರ ರಾಜ್ಯಗಳಿಂದ ಬರುವಂತಹ ಪ್ರಯಾಣಿಕರನ್ನು ಕೋವಿಡ್-19 ಪರೀಕ್ಷೆಗೆ ಒಳಪಡಿಸಬೇಕು. ಮುಂದಾಗುವ ಅನಾಹುತವನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದರು.

ಜಿಲ್ಲೆಯಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆ ಇದ್ದು ಯಥಾಸ್ಥಿತಿಯಲ್ಲಿ ನೋಡಿಕೊಳ್ಳಲು ಎಲ್ಲರ ಸಹಕಾರ ಬೇಕಿದೆ. ಶಿಕ್ಷಣ ಇಲಾಖೆಯವರು ಎಲ್ಲಾ ವಿದ್ಯಾರ್ಥಿಗಳಿಗೆ ಕೋವಿಡ್-19 ಪರೀಕ್ಷೆ ಮಾಡಿಸಬೇಕು. ಅದೇ ರೀತಿ ವಸತಿ ನಿಲಯಗಳು ಆರಂಭವಾಗಿರುವುದರಿಂದ ಎಲ್ಲಾ ವಸತಿ ನಿಲಯದ ವಿದ್ಯಾರ್ಥಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲು ಸಮಾಜ ಕಲ್ಯಾಣ ಇಲಾಖೆ ಕ್ರಮ ವಹಿಸಬೇಕು ಎಂದರು.

ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇರುವ ಎಲ್ಲಾ ನೌಕರರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಆಯಾ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗ ಶಾಲಾ (2ನೇ ಪುಟಕ್ಕೆ)

## ಮೊಯ್ಲಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ನವದೆಹಲಿ, ಮಾ. 12 - ರಾಜಕಾರಣಿ ಹಾಗೂ ಸಾಹಿತಿ ವೀರಪ್ಪ ಮೊಯ್ಲಿ ಸೇರಿದಂತೆ 20 ಲೇಖಕರಿಗೆ 2020ರ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಶುಕ್ರವಾರ ರಾಷ್ಟ್ರೀಯ ಅಕಾಡೆಮಿಯು ಪ್ರಶಸ್ತಿಗಳನ್ನು ಪ್ರಕಟಿಸಿದೆ. ವೀರಪ್ಪ ಮೊಯ್ಲಿ ಅವರು ಬರೆದಿರುವ 'ಶ್ರೀ ಬಾಹುಬಲಿ (2ನೇ ಪುಟಕ್ಕೆ)

ಸಾಲ ಸೌಲಭ್ಯ
ಮಾರ್ಕ್ಸ್ ಕಾರ್ಡ್, ಪ್ರಾಪರ್ಟಿ, ಪರ್ಸನಲ್ ಪ್ರಾಜೆಕ್ಟ್ ಮೇಲೆ ವಾರ್ಷಿಕ ಶೇ. 2ರ ಬಡ್ಡಿ ದರದಲ್ಲಿ ಸಬ್ಸಿಡಿ ಸಾಲವನ್ನು ಕೊಡಲಾಗುತ್ತದೆ. ಏಜೆಂಟರಿಗೆ ಅವಕಾಶವಿದೆ. ಆಸಕ್ತರು ಇದರ ಸದಾವಕಾಶವನ್ನು ಪಡೆದುಕೊಳ್ಳಲು ಕೂಡಲೇ ಸಂಪರ್ಕಿಸಿ
63604 56791

## ಆಯುಕ್ತರ ಕುರ್ಚಿಗೆ ಜಟಾಪಟಿ

### ಹರಿಹರ ನಗರಸಭೆ: ಹುದ್ದೆ ಒಂದು, ಅಧಿಕಾರಿಗಳಿಬ್ಬರು!

ಹರಿಹರ, ಮಾ. 12 – ಇಲ್ಲಿನ ನಗರಸಭೆ ಆಯುಕ್ತರ ಒಂದು ಹುದ್ದೆಗಾಗಿ ಇಬ್ಬರು ಅಧಿಕಾರಿಗಳು ಜಟಾಪಟಿ ನಡೆಸಿ, ಕೊನೆಗೆ ಇಬ್ಬರೂ ತಾವೇ ಆಯುಕ್ತರು ಎಂದು ಹೇಳಿಕೊಂಡು ಜನಸ್ಪಂದನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಘಟನೆ ಇಂದು ನಡೆದಿದೆ.

ಬೆಳಿಗ್ಗೆ ನಗರಸಭೆ ಆವರಣದ ಪೌರಾಯುಕ್ತರ ಕೊಠಡಿಗೆ ಪೌರಾಯುಕ್ತೆ ಎಸ್. ಲಕ್ಷ್ಮಿ ಆಗಮಿಸಿ ಸರ್ಕಾರ ನನಗೆ ಆದೇಶ ನೀಡಿದೆ ಎಂದು ನಗರಸಭೆಯ ಆಡಳಿತ ನಿರ್ವಹಿಸಲು ಮುಂದಾದರು. ನಂತರದಲ್ಲಿ ಲಕ್ಷ್ಮಿ ಕೆಲಸ ಇದೆ ಎಂದು ಹೊರಗಡೆ ತೆರಳಿದರು. ಸ್ವಲ್ಪ ಸಮಯದ ನಂತರ ಜನಸ್ಪಂದನ ಸಭೆ ನಡೆಸಲು ಶಾಸಕ ಎಸ್. ರಾಮಪ್ಪ ಆಗಮಿಸಿದರು, ಅದೇ ವೇಳೆಗೆ ಪೌರಾಯುಕ್ತ ಉದಯಕುಮಾರ್ ತಳವಾರ ಸಹ ಆಗಮಿಸಿ, ಪೌರಾಯುಕ್ತ ಕಚೇರಿಗೆ ಹೋದರು.

**ಟ್ರಿಬ್ಯೂನಲ್ ಆದೇಶದಂತೆ ನಾವು ಬಂದಾಗ ಅಧಿಕಾರ ವಹಿಸಿಕೊಡಬೇಕು. ಐದು ದಿನಗಳ ನಂತರವೇ ಅಧಿಕಾರ ಕೊಡುತ್ತೇನೆ ಎನ್ನುವುದು ಉದ್ಧಟತನವಾಗುತ್ತದೆ.**

**- ಎಸ್. ಲಕ್ಷ್ಮಿ**

**ನ್ಯಾಯಾಲಯದ ಆದೇಶದಲ್ಲಿ ತಕ್ಷಣವೇ ಅಧಿಕಾರ ಬಿಟ್ಟುಕೊಡಬೇಕು ಎಂದಿದ್ದರೆ ನಾನು ಹಾಗೆಯೇ ಮಾಡಬೇಕಿತ್ತು. ನ್ಯಾಯಾಲಯವೇ ನನಗೆ ಐದು ದಿನಗಳ ಕಾಲಾವಕಾಶ ಕೊಟ್ಟಿದೆ.**

**- ಬಿ. ಉದಯ ಕುಮಾರ್**

ನಂತರ ಪೌರಾಯುಕ್ತೆ ಎಸ್. ಲಕ್ಷ್ಮಿಯವರು ಶಾಸಕರ ಬಳಿ ಮಾತನಾಡಿ, ನನಗೆ ಸರ್ಕಾರ ಆದೇಶ ನೀಡಿದೆ. ನಮಗೆ ಅಧಿಕಾರ ವಹಿಸಿಕೊಂಡು ಕೆಲಸ ಮಾಡುವುದಕ್ಕೆ ಅವಕಾಶ (2ನೇ ಪುಟಕ್ಕೆ)



## ಹರಿಹರ ಜನಸ್ಪಂದನ ಸಭೆಯಲ್ಲಿ ಸಮಸ್ಯೆಗಳ ಸರಮಾಲೆ

ಹರಿಹರ, ಮಾ. 13- ತುಂಗಭದ್ರಾ ನದಿ ಮರಳು ಅಕ್ರಮ ಸಾಗಾಟಕ್ಕೆ ಕಡಿವಾಣವಿಲ್ಲ, ಹಂದಿ ಹಾವಳಿ, ಕುಡಿಯುವ ನೀರಿನ ಸಮಸ್ಯೆ, ಸ್ವಚ್ಛತೆಗೆ ಆದ್ಯತೆ ಇಲ್ಲ , ಯುಜಿಡಿ ಕಳಪೆ ಕಾಮಗಾರಿ, ಹಕ್ಕುಪತ್ರ ನೀಡಿಲ್ಲ ಇತ್ಯಾದಿ ಸಮಸ್ಯೆಗಳ ಕುರಿತು ಜನಸ್ಪಂದನ ಸಭೆಯಲ್ಲಿ ಸಾರ್ವಜನಿಕರು ಶಾಸಕ ಎಸ್. ರಾಮಪ್ಪನವರ ಬಳಿ ಹೇಳಿಕೊಂಡರು.

ಈ ವೇಳೆ ಮಾತನಾಡಿದ ಎಸ್. ರಾಮಪ್ಪ ನಗರಸಭೆಯಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸರಿಯಾದ ರೀತಿಯಲ್ಲಿ ತಮಗೆ ವಹಿಸಿರುವ ಕರ್ತವ್ಯವನ್ನು ಮಾಡುವಲ್ಲಿ ವಿಫಲರಾಗಿದ್ದಾರೆ ಎಂದು ಅನೇಕ ಸಾರ್ವಜನಿಕರು ತಮ್ಮ ಬಳಿ ನೋವನ್ನು (2ನೇ ಪುಟಕ್ಕೆ)

**ಜನಸ್ಪಂದನ ಸಭೆಯಲ್ಲಿ ಕೆಲವು ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಯನ್ನು ಕಂಡು ಶಾಸಕ ಎಸ್. ರಾಮಪ್ಪ ಏಕವಚನ ಬಳಕೆ ಮಾಡಿದ್ದು ಕಂಡು ಬಂತು. ಸಭೆಯಲ್ಲಿ ಉದಯಕುಮಾರ್ ತಳವಾರ ಮತ್ತು ಎಸ್. ಲಕ್ಷ್ಮೀ ನಗರಸಭೆಯ ಇಬ್ಬರೂ ಪೌರಾಯುಕ್ತರು, ಜನರು ತಮ್ಮ ಸಮಸ್ಯೆ ಹೇಳಿದಾಗ ಅವರ ಅವಧಿಯಲ್ಲಿ ಏನಾಗಿತ್ತೋ ಅದನ್ನು ಸಾರ್ವಜನಿಕರಿಗೆ ಹೇಳುವ ಕಾರ್ಯವನ್ನು ಮಾಡಿದರು. ಇದರಿಂದಾಗಿ ನಗರಸಭೆ ಪೌರಾಯುಕ್ತರು ಯಾರು ಎಂಬುದನ್ನು ಅರಿಯದ ಪರಿಸ್ಥಿತಿ ಸಾರ್ವಜನಿಕರದಾಗಿತ್ತು.**

## ನಾಗನೂರು ಎನ್.ಡಿ. ಜಯದೇವಪ್ಪ ನಿಧನ



ದಾವಣಗೆರೆ ತಾ|| ನಾಗನೂರು ಗ್ರಾಮದ ವಾಸಿ ಎನ್.ಡಿ. ಉಜ್ಜಪ್ಪನವರ ಪುತ್ರ ಹಾಗೂ ಎಪಿಎಂಸಿಯ ಮೆ|| ನಾಗನೂರು ಟ್ರೇಡಿಂಗ್ ಕಂಪನಿ ಪಾಲುದಾರರಾದ **ಶ್ರೀ ಎನ್.ಡಿ. ಜಯದೇವಪ್ಪ** ಅವರು ದಿನಾಂಕ 12.3.2021ರ ಶುಕ್ರವಾರ ರಾತ್ರಿ 10.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 54 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.3.2021ರ ಶನಿವಾರ ಮಧ್ಯಾಹ್ನ 1 ಗಂಟೆಗೆ ನಾಗನೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. 98444-30235, 90085-72352


## ಎಂ. ಕನ್ನಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, 6ನೇ ಮೇನ್ ವಾಸಿ, ಎಂ.ಕೆ. ಇಂಡಸ್ಟ್ರೀಸ್ ಮಾಲೀಕರಾದ **ಶ್ರೀ ಎಂ. ಕನ್ನಪ್ಪ** ಅವರು ದಿನಾಂಕ 12.03.2021ರ ಶುಕ್ರವಾರ ಸಂಜೆ 4.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.03.2021ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಜೆಎಂಐಟಿ ಹಿಂಭಾಗ, ಆಯುರ್ವೇದಿಕ್ ಕಾಲೇಜ್ ರಸ್ತೆಯಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೂಲಿಮನಿ ವಂಶಸ್ಥರು, ದಾವಣಗೆರೆ.

# ಹರಿಹರ ಜನಸ್ಪಂದನ ಸಭೆಯಲ್ಲಿ ಸಮಸ್ಯೆಗಳ ಸರಮಾಲೆ



**(1ನೇ ಪುಟದಿಂದ)** ತೋಡಿಕೊಂಡಿದ್ದರಿಂದಾಗಿ ಇಂದು ಜನಸ್ಪಂದನ ಸಭೆಯನ್ನು ಆಯೋಜಿಸುವ ವ್ಯವಸ್ಥೆ ಮಾಡಲಾಗಿದೆ. ಅಧಿಕಾರಿಗಳಲ್ಲಿ ಇಚ್ಛಾಶಕ್ತಿ ಕೊರತೆ ಬಹಳ ದೊಡ್ಡ ಪ್ರಮಾಣದಲ್ಲಿ ಕಂಡುಬಂದಿರುವುದನ್ನು ಕಾಣುತ್ತಿದ್ದೇವೆ. ಇದನ್ನು ಬಿಟ್ಟು ನಗರದ ಅಭಿವೃದ್ಧಿಗೆ ಪೂರಕವಾಗಿ ತಮ್ಮ ಕರ್ತವ್ಯ ನಿಭಾಯಿಸಿ ಎಂದು ಹೇಳಿದರು.

ಆರೋಗ್ಯ ಇಲಾಖೆಯ ಕೆಲವು ಅಧಿಕಾರಿಗಳ ವರ್ತನೆಯನ್ನು ನೋಡಿ ನಗರ ಗಬ್ಬೆದ್ದು ನಾರುವಂತಾಗಿದೆ. ಕೆಲಸ ಮಾಡುವುದಕ್ಕಾದರೆ ಮಾಡಿ, ಇಲ್ಲದೆ ಹೋದರೆ ಮನೆಗಳಿಗೆ ಹೋಗಿ ಎಂದು ಮಾತಿನ ಛಾಟಿ ಬೀಸಿದರು. ನಗರದ ಯಾವುದೇ ಸಮಸ್ಯೆಗಳನ್ನು ಸಾರ್ವಜನಿಕರು ತಂದಾಗ ಅದನ್ನು ವಿಳಂಬ ಮಾಡದೆ ಮತ್ತು ಕಚೇರಿಗೆ ಅಲೆದಾಡುವಂತೆ ಮಾಡದೆ ಬೇಗನೆ ಕೆಲಸ ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ನಡೆಯುತ್ತಿರವ ಯುಜಿಡಿ ಕಳಪೆ ಕಾಮಗಾರಿಯ ಬಗ್ಗೆ ಅನೇಕ ಜನರು ದೂರನ್ನು ಹೇಳಿದ್ದರಿಂದ ಆಕ್ರೋಶಗೊಂಡ ಶಾಸಕರು, ಅವನು ಯಾರು ಗುತ್ತಿಗೆದಾರ ಸ್ಥಳಕ್ಕೆ ಬರುವಂತೆ ಹೇಳಿ ಎಂದು ಯುಜಿಡಿ ಸಹಾಯಕ ಅಭಿಯಂತರ ಜಗದೀಶ್ ಅವರನ್ನು ತರಾಟೆಗೆ ತೆಗೆದುಕೊಂಡರು.

ನಗರಸಭೆ ಸಿಬ್ಬಂದಿಗಳು ಕಡಿಮೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ನಗರದ ಏಳು ನೂರು ಜನರಿಗೆ ಒಬ್ಬ ಪೌರ ಕಾರ್ಮಿಕರು ಇದ್ದರೆ ನಗರ ಸ್ವಚ್ಛತೆಯಿಂದ ಇರುತ್ತದೆ. ಆದರೆ ಸಿಬ್ಬಂದಿಗಳ ಕೊರತೆಯಿಂದ ಸ್ವಲ್ಪ ಮಟ್ಟಿಗೆ ಸ್ವಚ್ಛತೆಗೆ ಹಿನ್ನಡೆಯಾಗಿದೆ. ಈ ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿ ಬಳಿ ಮಾತನಾಡಿದ್ದು, ಮುಂದಿನ ದಿನಗಳಲ್ಲಿ ಸರಿ ಪಡಿಸುವ ವ್ಯವಸ್ಥೆ ಮಾಡಲಾಗುವುದು ಎಂದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ನಗರಸಭೆ ಅನ್ನುವುದು ಸ್ಥಳೀಯ ಜನತೆಗೆ ನರಕಸಭೆ ಅನ್ನುವ ಮಟ್ಟಕ್ಕೆ ಹೋಗಿ ನಿಂತಿದೆ. ಇಲ್ಲಿ ಯಾವುದೇ ಸಿಬ್ಬಂದಿಗಳು ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿಕೊಡುವಲ್ಲಿ ವಿಫಲರಾಗಿದ್ದಾರೆ. ಇದರಿಂದಾಗಿ ಸಾರ್ವಜನಿಕರು ರೋಸಿ ಹೋಗಿದ್ದಾರೆ. ಇದರ ಬಗ್ಗೆ ಸಾಕಷ್ಟು ಸಾರಿ ಹೇಳಿದ್ದರೂ ತಿದ್ದಿಕೊಂಡಿಲ್ಲ. ಈ ಬೆಳವಣಿಗೆ ಕೈ ಬಿಡದಿದ್ದರೆ ಮುಂದೆ ಸಾರ್ವಜನಿಕರೇ ಉತ್ತರ ನೀಡುವುದರಲ್ಲಿ ಯಾವುದೇ ಅನುಮಾನ ಇಲ್ಲ ಎಂದು ಹೇಳಿದರು.

ದಿವಾಕರ ಶಿಂಪಿ ಮಾತನಾಡಿ, ನಗರಸಭೆಯಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಬಡಾವಣೆಯ ಆಸ್ತಿಯನ್ನು ಖಾತೆ ಮಾಡುತ್ತಿಲ್ಲ. ಇದರಿಂದಾಗಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೋಂದಣೆ ಮಾಡಿಸಲು ಬರುವುದಿಲ್ಲ. ಬಡಾವಣೆಯ ಖಾತೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸುವಂತೆ ಹೇಳಿದರು.

ಸದಾಶಿವ ಬೊಂಗಾಳೆ ಮಾತನಾಡಿ, ನಗರದಲ್ಲಿ ಹೊಸದಾಗಿ ನಿರ್ಮಾಣ ಮಾಡಿರುವ ಬಡಾವಣೆಯಲ್ಲಿ ನಗರಸಭೆ ವತಿಯಿಂದ ಖಾತೆ ಮಾಡಿಕೊಡುವುದಕ್ಕೆ ಬರುವುದಿಲ್ಲ ಎಂದಾದರೆ ಆ ಬಡಾವಣೆಯ ನಿವಾಸಿಗಳಿಂದ ಯಾಕೆ ಕಂದಾಯವನ್ನು ಕಟ್ಟಿಸಿಕೊಳ್ಳುತ್ತೀರಾ. ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರದಲ್ಲಿ ಕಂದಾಯವನ್ನು ಕಟ್ಟಿಸಿಕೊಳ್ಳಿ ಎಂದರು.

ಜಿ.ಕೆ. ಸುರೇಶ್ ಮಾತನಾಡಿ, ನಗರದ ಕೆನರಾ ಬ್ಯಾಂಕ್ ಮುಂಭಾಗದಲ್ಲಿ ಚರಂಡಿ ಕಾಮಗಾರಿ ಮಾಡುವಂತೆ ಮೂರು ವರ್ಷಗಳಿಂದ ಹೇಳಿದರೂ ಅಧಿಕಾರಿಗಳು ಮಾಡುತ್ತಿಲ್ಲ. ಇದರಿಂದಾಗಿ ಈ ಸ್ಥಳದಲ್ಲಿ ಅನೇಕ ಅಪಘಾತ ಸಂಭವಿಸಿ ಸಾಕಷ್ಟು ನೋವುಗಳನ್ನು ಸಾರ್ವಜನಿಕರು ಪಡುವಂತಾಗಿದೆ ಎಂದು ಹೇಳಿದರು.

ಸುಲೋಚನಮ್ಮ ಮಾತನಾಡಿ, ನಗರದಲ್ಲಿನ ಬಡಾವಣೆಯಲ್ಲಿ ನಮಗೆ ಸೈಟಿನ ಹಕ್ಕುಪತ್ರವನ್ನು ನೀಡುವುದಾಗಿ ನಗರಸಭೆ ಅಧಿಕಾರಿಗಳು ನಮ್ಮ ಬಳಿ ಮೂವತ್ತು ಸಾವಿರ ಹಣವನ್ನು ಪಡೆದಿದ್ದಾರೆ. ಆದರೆ ಇದುವರೆಗೂ ನಮಗೆ ಹಕ್ಕುಪತ್ರವನ್ನು ನೀಡಿರುವುದಿಲ್ಲ ಮತ್ತು ಯಾವುದೇ ಮೂಲಭೂತ ಸೌಕರ್ಯಗಳ ನ್ನು ನೀಡದೆ ಕಂದಾಯವನ್ನು ಕಟ್ಟಿ ಎಂದು ಜೋರು ಮಾಡುತ್ತಾರೆ ಎಂದು ಹೇಳಿದರು.

ವಿಶ್ವನಾಥ ಮೈಲಾಳ ಮಾತನಾಡಿ, ನಗರದ ಮೋಚಿ ಕಾಲೋನಿಯಲ್ಲಿರುವ ನಗರಸಭೆ ಸ್ಥಳದಲ್ಲಿ ಇಬ್ಬರು ವ್ಯಕ್ತಿಗಳು ಆ ಸ್ಥಳವನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಅದರಲ್ಲಿ ಮಳಿಗೆ ನಿರ್ಮಾಣ ಮಾಡಿ ಬಾಡಿಗೆ ಹಣವನ್ನು ಅಕ್ರಮವಾಗಿ ತಿನ್ನುತ್ತಿದ್ದಾರೆ. ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಹೇಳಿದರು. ನಾಗರಾಜ್ ಬಡಿಗೇರ ಮಾತನಾಡಿ, ನಗರಸಭೆಯ ಮಾಜಿ ಅಧ್ಯಕ್ಷ ವಿಶ್ವನಾಥ ಭೂತೆ ಅವರು ತಮ್ಮ ಪ್ರಭಾವವನ್ನು ಬೀರಿ ನಮ್ಮ ಆರು ಅಡಿ ಸ್ಥಳವನ್ನು ಅಕ್ರಮ ಮಾಡಿಕೊಂಡು ಕಟ್ಟಡವನ್ನು ಕಟ್ಟಿದ್ದಾರೆ ಮತ್ತು ಈ ಸ್ಥಳದಲ್ಲಿ ಇರುವ ದೇವಸ್ಥಾನದ ಜಾಗವನ್ನು ಸಹ ಆಕ್ರಮಿಸಿಕೊಂಡಿದ್ದಾರೆ ಎಂದು ಆರೋಪಿಸಿದರು. ಹೆಚ್. ಸುಧಾಕರ ಮಾತನಾಡಿ, ನಗರಸಭೆಯಲ್ಲಿ ಸಿಬ್ಬಂದಿಗಳು ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ನಗರ ಸ್ವಚ್ಛತೆ ಕೆಲಸಗಳು ಸರಿಯಾದ ಸಮಯಕ್ಕೆ ಆಗುತ್ತಿಲ್ಲ. ಆದ್ದರಿಂದ ನಗರಸಭೆ ಸಿಬ್ಬಂದಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೇಮಕಾತಿ ಮಾಡಿಕೊಳ್ಳುವಂತೆ ಹೇಳಿದರು.

ಪೌರಾಯುಕ್ತೆ ಎಸ್ ಲಕ್ಷ್ಮಿ ಮಾತನಾಡಿ, ನಗರದ ಮೋಚಿ ಕಾಲೋನಿಯಲ್ಲಿರುವ ನಗರಸಭೆ ಸ್ಥಳವನ್ನು ಅಕ್ರಮ ಮಾಡಿಕೊಳ್ಳಲು ಹಿಂದೆ ಇದ್ದ ನಗರಸಭೆ ಅಧಿಕಾರಿಗಳು ಮಾಡಿರುವ ತಪ್ಪಿನಿಂದಾಗಿದೆ. 10-10 ಅಡಿ ಅವರ ಹೆಸರಿನಲ್ಲಿ ಇದ್ದ ಜಾಗವನ್ನು 70 -20 ಅಡಿಯಲ್ಲಿ ಅಕ್ರಮವಾಗಿ ಖಾತೆ ಮಾಡಲಾಗಿದೆ. ಇದರ ಬಗ್ಗೆ ಆರ್.ಸಿ. ಅಡಿಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ನ್ಯಾಯಲಯದ ಆದೇಶ ಬಂದ ತಕ್ಷಣವೇ ಮಳಿಗೆ ಕಟ್ಟಡವನ್ನು ಧ್ವಂಸ ಮಾಡಲಾಗುವುದು ಎಂದು ಹೇಳಿದರು.

ಪೌರಾಯುಕ್ತ ಉದಯಕುಮಾರ್ ಮಾತನಾಡಿ, ನಾನು ಯಾವುದೇ ವ್ಯಕ್ತಿಗಳು ಫೋನ್ ಮಾಡಿದಾಗ ತಕ್ಷಣವೇ ಸ್ಪಂದಿಸುವ ಕೆಲಸವನ್ನು ಮಾಡಿದ್ದು, ಆದರೆ ಕೆಲಸದ ಒತ್ತಡದಿಂದಾಗಿ ಕೆಲವು ಸಲ ಫೋನ್ ಎತ್ತದೆ ಇರಬಹುದು. ಆದರೆ, ಸ್ಥಳೀಯ ಜನತೆಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಿರುವುದಾಗಿ ಹೇಳಿದರು.

ಚಿದಾನಂದ ಕಂಚಿಕೇರಿ ಮಾತನಾಡಿ, ಹಲವು ವರ್ಷಗಳಿಂದ ನಗರಸಭೆಯಲ್ಲಿ ಠಿಕಾಣಿ ಹೂಡಿರುವ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕರ್ತವ್ಯ ಮಾಡದೆ ಇದ್ದರೆ ನಿಮ್ಮನ್ನು ವರ್ಗಾವಣೆ ಮಾಡಿಸುವುದಾಗಿ ಪ್ರಾರಂಭದಲ್ಲಿ ನಡೆದ ಜನಸ್ಪಂದನ ಸಭೆಯಲ್ಲಿ ತಿಳಿಸಿದ್ದಿರಿ. ಆದರೆ ನಗರಸಭೆ ಆರೋಗ್ಯ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಯನ್ನು ನೋಡಿಯೂ ಏಕೆ ಅವರನ್ನು ಬೇರೆ ನಗರಕ್ಕೆ ವರ್ಗಾವಣೆ ಮಾಡಲು ಮುಂದಾಗಿಲ್ಲ ಎಂದು ಪ್ರಶ್ನಿಸಿದರು.

ಯುಜಿಡಿ ಸಹಾಯಕ ಅಭಿಯಂತರ ಜಗದೀಶ್ ಮಾತನಾಡಿ, ನಗರದ ಹಳೆ ನಗರದ ಯುಜಿಡಿ ಕಾಮಗಾರಿಯನ್ನು ನಾವು ಮಾಡಿರುವುದಿಲ್ಲ. ಇದರಿಂದಾಗಿ ಆ ಕಳಪೆ ಕಾಮಗಾರಿ ರಾಮಕೃಷ್ಣಪ್ಪನವರು ಇದ್ದ ಸಮಯದಲ್ಲಿ ಆಗಿದೆ. ಅದಕ್ಕೂ ನಮಗೆ ಸಂಬಂಧವಿಲ್ಲ. ನಗರದ ಹೈಸ್ಕೂಲ್ ಬಡಾವಣೆಯಲ್ಲಿ ಕಾಮಗಾರಿ ನಡೆಯುತ್ತಿದೆ. ಅದರಲ್ಲಿ ಯಾವುದೇ ರೀತಿಯ ಕಳಪೆ ಕಾಮಗಾರಿ ನಡೆದಿದ್ದರೆ ತಿಳಿಸಿರಿ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಪಕ್ಕೀರಮ್ಮ, ನಾಗರತ್ನಮ್ಮ, ನೀತಾ ಮೆಹರ್ವಾಡೆ, ಹನುಮಂತಪ್ಪ ಬಾಬುಲಾಲ್, ಮುಜಾಮಿಲ್, ಮಹಬೂಬ್ ಬಾಷಾ, ಮುಖಂಡರಾದ ಮಂಜುನಾಥ್ ಅಂಗಡಿ, ಮಾರುತಿ ಬೇಡರ್, ದಾದಪೀರ್. ಅರುಣ್ ಬೊಂಗಾಳೆ, ನಗರಸಭೆ ಎಇಇ ಬಿರಾದಾರ, ಪರಿಸರ ಅಭಿಯಂತರ ತಿಮ್ಮಪ್ಪ ಅಬ್ದುಲ್ ಹಮೀದ್, ನಗರಸಭೆ ಸಿಬ್ಬಂದಿಗಳಾದ ಮಂಜುನಾಥ್, ತಿಪ್ಪೇಸ್ವಾಮಿ, ದಯಾನಂದ, ಪ್ರವೀಣ್, ಅಣ್ಣಪ್ಪ, ಇತರರು ಹಾಜರಿದ್ದರು.

## ಆಯುಕ್ತರ ಕುರ್ಚಿಗೆ ಜಟಾಪಟಿ

**(1ನೇ ಪುಟದಿಂದ)** ಕಲ್ಪಿಸುವಂತೆ ಮನವಿಯನ್ನು ಮಾಡಿಕೊಂಡರು. ಆದರೆ, ಇದಕ್ಕೆ ಪೌರಾಯುಕ್ತ ಉದಯಕುಮಾರ್ ತಳವಾರ ಆಕ್ಷೇಪಣೆ ಎತ್ತಿದರು. ತಾವು ಈಗ ಅಧಿಕಾರ ಬಿಟ್ಟು ಕೊಡುವುದಿಲ್ಲ. ಐದು ದಿನಗಳ ನಂತರ ಸೋಮವಾರ ಸಂಜೆ ಅಧಿಕಾರ ಹಸ್ತಾಂತರ ಮಾಡುವುದಾಗಿ ಬಿಗಿ ಪಟ್ಟು ಹಿಡಿದರು.

ಈ ಹಿಂದೆ ವರ್ಗಾವಣೆಯಾಗಿದ್ದ ಎಸ್. ಲಕ್ಷ್ಮಿ ತಮ್ಮ ವರ್ಗಾವಣೆ ಆದೇಶ ಪ್ರಶ್ನಿಸಿ, ಕರ್ನಾಟಕ ಆಡಳಿತಾತ್ಮಕ ಟ್ರಿಬ್ಯೂನಲ್ ಮೊರೆ ಹೋಗಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಟ್ರಿಬ್ಯೂನಲ್, ಮಾ.10 ರಂದು ಆದೇಶ ಹೊರಡಿಸಿ ಲಕ್ಷ್ಮಿ ಅವರ ವರ್ಗಾವಣೆಯನ್ನು ತಳ್ಳಿ ಹಾಕಿತ್ತು. ಆದೇಶದ ಪ್ರತಿಯೊಂದಿಗೆ ಆಗಮಿಸಿದ ಲಕ್ಷ್ಮಿ, ಹಾಲಿ ಆಯುಕ್ತರಾಗಿರುವ ಬಿ. ಉದಯಕುಮಾರ್ ಅಧಿಕಾರ ಬಿಟ್ಟುಕೊಡಬೇಕೆಂದು ಕೇಳಿದರು. ಆದೇಶದ ಪ್ರತಿಯಲ್ಲಿ 'ಆದೇಶ ಹೊರಡಿಸಿದ ಐದು ದಿನಗಳ ಒಳಗಾಗಿ ಅಧಿಕಾರ ಬಿಟ್ಟು ಕೊಡಬೇಕು' ಎಂದು ಹೇಳಿರುವುದನ್ನು ಪ್ರಸ್ತಾಪಿಸಿದ ಉದಯ ಕುಮಾರ್, ಬರುವ ಸೋಮವಾರದಂದು ಅಧಿಕಾರ ಬಿಟ್ಟುಕೊಡುವುದಾಗಿ ಹೇಳಿದರು. ಇದಕ್ಕೆ ಒಪ್ಪದ ಲಕ್ಷ್ಮಿ, ಐದು ದಿನಗಳ ಗಡುವಿನಲ್ಲಿ ಯಾವಾಗ ಬಂದರೂ ಅಧಿಕಾರ ಬಿಟ್ಟುಕೊಡಬೇಕು. ಹೀಗಾಗಿ ಈಗಲೇ ಅಧಿಕಾರ ಕೊಡುವಂತೆ ಕೇಳಿದರು.

ಜಟಾಪಟಿಯ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ್ದ ಶಾಸಕ ಎಸ್. ರಾಮಪ್ಪ ಮತ್ತು ನಗರಸಭೆಯ ಹಿರಿಯ ಸದಸ್ಯ ಶಂಕರ್ ಖಟಾವ್ಕರ್ ಅವರು, ಕುರ್ಚಿ ಜಟಾಪಟಿಯನ್ನು ಬಗೆಹರಿಸುವ ಪ್ರಯತ್ನ ನಡೆಸಿದರು. ಆದರೆ ಯಾವುದೇ ಇತ್ಯರ್ಥಕ್ಕೆ ಬರಲು ಸಾಧ್ಯವಾಗಲಿಲ್ಲ. ಇಂದು ನಡೆಯುವ ಜನಸ್ಪಂದನ ಸಭೆಗೆ ನೀವು ಇಬ್ಬರು ಅಧಿಕಾರಿಗಳು ಬರುವುದು ಬೇಡ. ಇನ್ನು ಉಳಿದ ಅಧಿಕಾರಿಗಳನ್ನು ಇಟ್ಟುಕೊಂಡು ನಾವು ಸಭೆಯನ್ನು ಮಾಡುತ್ತೇವೆ ಎಂದು ಪೌರಾಯುಕ್ತರ ಕೊಠಡಿಯಿಂದ ಹೊರಗೆ ಬಂದು ಜನಸ್ಪಂದನ ಸಭೆ ಮಾಡುವುದಕ್ಕೆ ಮುಂದಾದರು.


ಲಕ್ಷ್ಮಿ ಹಾಗೂ ಉದಯ ಕುಮಾರ್ ಇಬ್ಬರೂ ಟ್ರಿಬ್ಯೂನಲ್ ಆದೇಶದಂತೆ ನಾವೇ ಹಾಲಿ ಆಯುಕ್ತರು ಎಂದು ಹೇಳಿಕೊಂಡರು. ನಂತರ ಉಭಯರು ಜನಸ್ಪಂದನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಜನರು ಸಲ್ಲಿಸಿದ ಮನವಿಗೆ ಇಬ್ಬರೂ ಉತ್ತರಿಸಿದರು. ಸದ್ಯಕ್ಕೀಗ ಹರಿಹರ ನಗರಸಭೆಯದು ಆಯುಕ್ತರ ಹುದ್ದೆಯೊಂದು, ಅಧಿಕಾರಿಗಳು ಇಬ್ಬರು ಎಂಬಂತಾಗಿದೆ.

## ಐವರು ಎಸ್.ಐ.ಟಿ. ವಶಕ್ಕೆ

**(1ನೇ ಪುಟದಿಂದ)** ಚಿಕ್ಕಮಗಳೂರಿನ ಆಲ್ದೂರಿನ ಒಬ್ಬ, ರಾಮನಗರ ಮೂಲದ ಯುವತಿ ಸೇರಿ ಐವರನ್ನು ವಶಕ್ಕೆ ಪಡೆಯಲಾಗಿದೆ.

ಸದ್ಯ ವಶಕ್ಕೆ ತೆಗೆದುಕೊಂಡವರಲ್ಲಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರದು ಎಂದು ಹೇಳಲಾದ ಸಿ.ಡಿ.ಯಲ್ಲಿ ಕಾಣಿಸಿಕೊಂಡಿದ್ದ ಯುವತಿಯ ಬಾಯ್ ಫ್ರೆಂಡ್ ಕೂಡ ಸೇರಿದ್ದಾನೆ ಎಂದು ಮೂಲಗಳು ತಿಳಿಸಿವೆ.

## ಸೂಳೆಕೆರೆ : ಸಿದ್ದೇಶ್ವರ ಸ್ವಾಮಿಗೆ ಅಭಿಷೇಕ



ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ (ಶಾಂತಿಸಾಗರ) ಶ್ರೀ ಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ ಅಮಾವಾಸ್ಯೆ ಪ್ರಯುಕ್ತ ಅಭಿಷೇಕ ಮತ್ತು ವಿಶೇಷ ಪೂಜೆ. ಮಧ್ಯಾಹ್ನ ದೊಡ್ಡಬಾತಿ, ಹಳೇಬಾತಿ ಗ್ರಾಮದ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಶ್ರೀ ಬೀರಲಿಂಗೇಶ್ವರ ಸ್ವಾಮಿಯನ್ನು ಗ್ರಾಮಕ್ಕೆ ಸ್ವಾಗತಿಸಲಾಗುವುದು.

## ಇಂದು ಮಹಿಳಾ ದಿನಾಚರಣೆ

**ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ವಿದ್ಯಾನಗರ ಕಸ್ತೂರಬಾ ಸಮಾಜದ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, 'ಚಿತ್ರದುರ್ಗದ ನಾಗತಿ ಗಂಡೋಬಳವ್ವ' ಕೃತಿ ಪರಿಚಯ ಹಾಗೂ ಬಹುಮಾನ ವಿತರಣಾ ಸಮಾರಂಭ. ಸಮಯ : ಬೆಳಿಗ್ಗೆ 11 ಕ್ಕೆ.

ಅಧ್ಯಕ್ಷತೆ : ಡಾ. ಎನ್. ಶಕುಂತಲಾ. ಅತಿಥಿಗಳು : ಡಾ. ಪುಷ್ಪಾವತಿ ಸಾಲವಾಡಿ ಮಠ, ಪ್ರೊ. ಶಕುಂತಲಾ ಗುರುಸಿದ್ದಯ್ಯ, ಉಜ್ವಲಾ ಸುಭಾಷ್, ಸರೋಜಾ ಚಂದ್ರಶೇಖರ್. ಡಾ. ಜಿ. ಕಾವ್ಯಶ್ರೀ, ಟಿ. ಶೇಷಪ್ಪ.

**ಎಂಎಸ್‌ಬಿ ಕಾಲೇಜಿನಲ್ಲಿ :** ನಗರದ ಎಂ.ಎಸ್.ಬಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ. ಸಮಯ : ಮಧ್ಯಾಹ್ನ 12 ಕ್ಕೆ. ಅತಿಥಿ : ಶಿಲ್ಪಾ, ಅಧ್ಯಕ್ಷತೆ ಪ್ರೊ. ಎ.ಡಿ. ಬಸಪ್ಪ.

**ಎಸ್.ಬಿ.ಸಿ ಕಾಲೇಜಿನಲ್ಲಿ :** ನಗರದ ಎಸ್.ಎಸ್. ಬಡಾವಣೆ ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು (ಎಸ್.ಬಿ.ಸಿ.) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಸಮಯ : ಬೆಳಿಗ್ಗೆ 10.30 ಕ್ಕೆ ಸ್ಥಳ : ಕಾಲೇಜಿನ ಸಭಾಂಗಣ. ಉದ್ಘಾಟನೆ : ಡಾ. ಅನಿತಾ ಹೆಚ್. ಎಸ್. ಅತಿಥಿ : ಡಿ. ಪ್ರಿಯಾಂಕ. ಅಧ್ಯಕ್ಷತೆ : ಪ್ರಾಂಶುಪಾಲ ಡಾ. ಕೆ. ಷಣ್ಮುಖ.

## ಹಳೇಕುಂದವಾಡದಲ್ಲಿ ಇಂದು ಗುಗ್ಗಳ

ಹಳೇಕುಂದುವಾಡ ಗ್ರಾಮದಲ್ಲಿರುವ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಮಹಾಶಿವರಾತ್ರಿ ವಿಶೇಷ ಪೂಜೆ ಪ್ರಯುಕ್ತ ಇಂದು ಬೆಳಿಗ್ಗೆ 7.30 ಕ್ಕೆ ಶ್ರೀ ವೀರಭದ್ರೇಶ್ವರ ಗುಗ್ಗಳ ಕಾರ್ಯಕ್ರಮವಿದೆ.

ಆವರಗೊಳ್ಳದ ಶ್ರೀ ಓಂಕಾರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಮನೂರು ಜಯಣ್ಣ ಮತ್ತು ಕುಟುಂಬ ವರ್ಗದವರು, ಪಾಲಿಕೆ ಸದಸ್ಯರಾದ ದೇವರಮನೆ ಶಿವಕುಮಾರ್, ಶಿವಗಂಗಾ ಬಸವರಾಜ್, ಅತಿಥಿಗಳಾಗಿ ಪ್ರಶಾಂತ್, ದೇವರಮನೆ ಯೋಗೀಶ್ ಇನ್ನಿತರರು ಆಗಮಿಸಲಿದ್ದಾರೆ.

## ಗಂಗನರಸಿ : ಇಂದಿನಿಂದ ದಾಸೋಹ

ಜಿಲ್ಲೆಯ ಹರಿಹರ ತಾಲ್ಲೂಕು ಗಂಗನರಸಿ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠದಲ್ಲಿ ಈ ಹಿಂದೆ ಪ್ರತಿ ತಿಂಗಳು ನಡೆಯುತ್ತಿದ್ದ ಅಮವಾಸ್ಯೆ ದಾಸೋಹವನ್ನು ಕೋವಿಡ್-19 ಕಾರಣದಿಂದ ಸರ್ಕಾರದ ಆದೇಶದಂತೆ ನಿಲ್ಲಿಸಲಾಗಿತ್ತು.

ಈಗ ಕೊರೊನಾ ಕಡಿಮೆಯಾಗಿದ್ದರಿಂದ ಭಕ್ತರ ಅಪೇಕ್ಷೆಯ ಮೇರೆಗೆ ದಾಸೋಹವನ್ನು ಇಂದಿನ ಶಿವರಾತ್ರಿ ಅಮವಾಸ್ಯೆಯಿಂದ ಪ್ರಾರಂಭ ಮಾಡಲಾಗುವುದು. ಇಂದಿನ ಪ್ರಸಾದ ವ್ಯವಸ್ಥೆಯನ್ನು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್. ಬಸಪ್ಪ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು ನಡೆಸಿಕೊಡಲಿದ್ದಾರೆ ಎಂದು ದೇವಸ್ಥಾನ ಸಮಿತಿ ಕಾರ್ಯದರ್ಶಿ ಗೌಡ್ರು ಚನ್ನಬಸಪ್ಪ ತಿಳಿಸಿದ್ದಾರೆ.

## ಸಂಸದರ ಇಂದಿನ ಕಾರ್ಯಕ್ರಮ

ಸಂಸದ ಜಿ.ಎಂ.ಸಿದ್ದೇಶ್ವರ ಅವರು ಇಂದು ಬೆಳಗ್ಗೆ 11ಕ್ಕೆ ಹೊಳಲ್ಕೆರೆ ತಾಲ್ಲೂಕಿನ ಬಿ. ದುರ್ಗ ಗ್ರಾಮದಲ್ಲಿ ಇಂದಿರಾಗಾಂಧಿ ವಸತಿ ಶಾಲೆಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ, ಬೆಳಗ್ಗೆ 11.30 ಕ್ಕೆ ಹೊನ್ನಾಳಿ ತಾಲ್ಲೂಕಿನ ಚೀಲೂರು ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ಇಲಾಖೆ ವತಿಯಿಂದ 'ನಮ್ಮ ನಡಿಗೆ – ತ್ಯಾಜ್ಯ ಮುಕ್ತ ಕಡೆಗೆ' ಸ್ವಚ್ಛ ಸಂಕೀರ್ಣ ಘಟಕ ಉದ್ಘಾಟನೆ ಕಾರ್ಯಕ್ರಮದಲ್ಲಿ ನಂತರ ಮಧ್ಯಾಹ್ನ 2ಕ್ಕೆ ಚನ್ನಗಿರಿಯಲ್ಲಿ ಸಂತ ಶ್ರೀ ಸೇವಾಲಾಲ್ ರವರ 282ನೇ ಜಯಂತ್ಯೋತ್ಸವ ಹಾಗೂ ಬಂಜಾರ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ..

## ಎಂಪಿಆರ್ ಅವರ ಇಂದಿನ ಪ್ರವಾಸ

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ ರೇಣುಕಾಚಾರ್ಯ ಇಂದು ಬೆಳಿಗ್ಗೆ 11 ಕ್ಕೆ ಚೀಲೂರು ಘನ ತ್ಯಾಜ್ಯ ಘಟಕದ ಉದ್ಘಾಟನೆ, ಮಧ್ಯಾಹ್ನ 12.30ಕ್ಕೆ ಕುಂಕೋವಾದಲ್ಲಿ ವೀರಭದ್ರೇಶ್ವರ ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮ, ನಂತರ ಮಧ್ಯಾಹ್ನ 1 ಕ್ಕೆ ಹೊನ್ನಾಳಿಯ ಸರ್ಕಾರಿ ನೌಕರರ ಭವನದಲ್ಲಿ ನಡೆಯುವ ಗ್ರಾ.ಪಂ. ನೌಕರರ ಸಂಘದ ಸಮ್ಮೇಳನದಲ್ಲಿ ಭಾಗವಹಿಸುವರು. ಹಾಗೂ ಮಧ್ಯಾಹ್ನ 2 ಕ್ಕೆ ಹೊನ್ನಾಳಿಯ ಸಾರ್ವಜನಿಕರ ಕುಂದು ಕೊರತೆಗಳ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ.

## ರಾಜ್ಯಕ್ಕೆ ಎರಡನೇ ಅಲೆ ಎಚ್ಚರಿಕೆ

**(1ನೇ ಪುಟದಿಂದ)** ಕೆಲವು ಜಿಲ್ಲೆಗಳಲ್ಲಿ ಇದರ ಪ್ರಮಾಣ ಏರಿಕೆ ಕಾಣುತ್ತಿದೆ. ಈಗಲೇ ಕಟ್ಟೆಚ್ಚರ ವಹಿಸಿದರೆ, ಮುಂದಾಗುವ ಅನಾಹುತವನ್ನು ತಡೆಯಬಹುದೆಂದು ಹೇಳಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿರುವ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಹಾರಾಷ್ಟ್ರದಲ್ಲಿ ಕೊರೊನಾದ ಅಲೆ ಆರಂಭಗೊಂಡಿದೆ. ರಾಜ್ಯ ದಲ್ಲಿ ಜನತೆ ಎಚ್ಚರ ವಹಿಸಬೇಕು. ಸಭೆ, ಸಮಾರಂಭಗಳಿಗೆ ಹೆಚ್ಚು ಜನರು ಸೇರುವುದನ್ನು ತಡೆದಲ್ಲಿ, ಸೋಂಕನ್ನು ತಡೆಯಲು ಸಾಧ್ಯವಾಗುತ್ತದೆ ಎಂದಿದ್ದಾರೆ. ನಮ್ಮಲ್ಲಿ ಇನ್ನೂ ಕೊರೊನಾವಿದೆ. ಹಾಗಾಗಿ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ. ಸದ್ಯಕ್ಕೆ ಲಾಕ್‌ಡೌನ್ ಪರಿಸ್ಥಿತಿಗೆ ಬಂದಿಲ್ಲ. ಆದರೂ ನಾವು ಕೆಲವು ಕಠಿಣ ಕ್ರಮ ಕೈಗೊಳ್ಳಲು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

## ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ನಿರ್ಣಯ

**(1ನೇ ಪುಟದಿಂದ)** ತಂತ್ರಜ್ಞರು ಇದ್ದು ಅಲ್ಲಿಯೇ ಪರೀಕ್ಷೆ ಮಾಡಿಸಲು ಕೋರಿದರು. ನಗರದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಸಹಾಯಕಿಯರು, ಶಾಲೆಗಳಲ್ಲಿ ಬಿಸಿ ಊಟ ತಯಾರಿಸುವ ಸಹಾಯಕರನ್ನು ಕೋವಿಡ್-19 ಪರೀಕ್ಷೆಗೆ ಒಳಪಡಿಸಬೇಕು ಎಂದು ತಿಳಿಸಿದರು. 3 ನೇ ಹಂತದ ಲಸಿಕಾ ಕಾರ್ಯ ಮಾ.1 ರಿಂದ ಪ್ರಾರಂಭವಾಗಿದ್ದು , ಎಲ್ಲಾ ಇಲಾಖಾ ಸಿಬ್ಬಂದಿಯವರು ಲಸಿಕೆಯನ್ನು ಪಡೆಯಲು ಸಭೆಯಲ್ಲಿ ತಿಳಿಸಲಾಯಿತು. ಗ್ರೇಡ್-2 ತಹಶೀಲ್ದಾರ್ ದೇವರಾಜ್ ಮಾತನಾಡಿ, ಎಲ್ಲ ಇಲಾಖೆಯವರು ತಮ್ಮ ಇಲಾಖೆ ಸಿಬ್ಬಂದಿಯವರ ಮಾಹಿತಿಯನ್ನು ಸಿದ್ಧಪಡಿಸಿ ಲಸಿಕೆಯನ್ನು ಪಡೆಯಲು ಮುಂದಾಗಬೇಕು. 2ನೇ ಹಂತದ ಅಲೆಯು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಹೋತ್ಸವಕ್ಕೆ ಮೋದಿ ಚಾಲನೆ

**(1ನೇ ಪುಟದಿಂದ)** ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಸ್ಥಳಗಳನ್ನು ಪಂಚತೀರ್ಥಗಳ ರೂಪದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಜಲಿಯನ್ ವಾಲಾ ಬಾಗ್ ಹಾಗೂ ಪೈಕಾ ಚಳುವಳಿಯ ಸ್ಮಾರಕಗಳನ್ನೂ ಅಭಿವೃದ್ಧಿ ಪಡಿಸಲಾಗಿದೆ ಎಂದವರು ತಿಳಿಸಿದ್ದಾರೆ. ಅಹಮದಾಬಾದ್ ವಿಮಾನ ನಿಲ್ದಾಣಕ್ಕೆ ಬಂದಿಳಿದ ನಂತರ ಪ್ರಧಾನಿ ಸಾಬರಮತಿ ಆಶ್ರಮಕ್ಕೆ ತೆರಳಿ ಮಹಾತ್ಮ ಗಾಂಧಿಗೆ ನಮನ ಸಲ್ಲಿಸಿದರು. ನಂತರ ಮಹಾತ್ಮ ಗಾಂಧಿ ಅವರು 1918 ರಿಂದ 1930ರ ನಡುವೆ ನೆಲೆಸಿದ್ದ ಹೃದಯ ಕುಂಜ ಮನೆಗೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಭೇಟಿ ನೀಡುವವರ ಪುಸ್ತಕದಲ್ಲಿ ತಮ್ಮ ಅನಿಸಿಕೆ ಬರೆದಿರುವ ಪ್ರಧಾನಿ ಮೋದಿ, ಮಹಾತ್ಮ ಗಾಂಧಿ ನಮಗೆ ಆತ್ಮ ನಿರ್ಭರತೆ ಹಾಗೂ ಆತ್ಮವಿಶ್ವಾಸದ ಸಂದೇಶವನ್ನು ಇಲ್ಲಿಂದ ನೀಡಿದ್ದಾರೆ ಎಂದಿದ್ದಾರೆ.

## ಮೊಯ್ಲಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**(1ನೇ ಪುಟದಿಂದ)** ಅಹಿಂಸಾ ದಿಗ್ವಿಜಯ' ಮಹಾಕಾವ್ಯಕ್ಕೆ ಕನ್ನಡ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗಿದೆ. ಅರುಂಧತಿ ಸುಬ್ರಮಣ್ಯಂ ಅವರು ಬರೆದಿರುವ 'ವೆನ್ ಗಾಡ್ ಈಸ್ ಟ್ರಾವೆಲರ್' ಕವನ ಸಂಕಲನಕ್ಕೆ ಪ್ರಶಸ್ತಿ ನೀಡಲಾಗಿದೆ.

## ಬಾಲನಹಳ್ಳಿ ಆಂಜನೇಯ ಸ್ವಾಮಿ ರಥೋತ್ಸವ



ಹರಪನಹಳ್ಳಿ, ಮಾ.12- ತಾಲ್ಲೂಕಿನ ಬಾಲನಹಳ್ಳಿಯಲ್ಲಿ ಮಹಾ ಶಿವರಾತ್ರಿ ಅಂಗವಾಗಿ ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಂಜನೇಯಸ್ವಾಮಿ ರಥೋತ್ಸವ ಜರುಗಿತು.

ರಥೋತ್ಸವದಲ್ಲಿ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮುಖಂಡರಾದ ಗೌಡ್ರು ಪರಶುರಾಮಪ್ಪ, ಜಿ. ಕೆಂಚನಗೌಡ್ರು, ಜಿ. ರಾಮನಗೌಡ್ರು, ಮುಖ್ಯ ಶಿಕ್ಷಕ ಎಸ್. ರೇವಣಸಿದ್ದಪ್ಪ, ತೌಡೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ ಶೆಟ್ಟಿನಾಯ್ಕ, ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತ ರಕ್ಷಣಾ ಸಮಿತಿಯ ರಾಜ್ಯ ಅಧ್ಯಕ್ಷ ಎಚ್. ಕೊಟ್ರೇಶ್, ಗೌಡ್ರು ಶಿವಕುಮಾರ, ಗೌಡ್ರು ರವಿರಾಜ, ಪಿಡಿಓ ಮಾರುತಿ, ಯುವ ಮುಖಂಡ ಜಿಟ್ಟಿನಕಟ್ಟಿ ಹೆಚ್.ಕೆ. ಮಂಜುನಾಥ ಇನ್ನಿತರರು ಪಾಲ್ಗೊಂಡಿದ್ದರು.

## ತುಂಬಿಗೆರೆ ಪಿಎಸಿಎಸ್ ಅಧ್ಯಕ್ಷರಾಗಿ ಮಂಜುನಾಥಯ್ಯ ಆಯ್ಕೆ





ದಾವಣಗೆರೆ, ಮಾ. 12- ತಾಲ್ಲೂಕಿನ ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸಿದ್ದನೂರಿನ ಎಸ್.ಎಂ ಮಂಜುನಾಥಯ್ಯ ಹಾಗೂ ಉಪಾಧ್ಯಕ್ಷರಾಗಿ ಬೋರಗೊಂಡನಹಳ್ಳಿಯ ಬಿ. ಲಕ್ಷ್ಮಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ಅಧೀಕ್ಷಕ ಆರ್. ರಮೇಶ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಡಿ.ಜಿ.ಸಿ. ದಿನೇಶ್‌ಕುಮಾರ್, ಎಸ್. ಬಸವರಾಜ್, ಬಿ.ಕೆ. ಜಯಪ್ರಕಾಶ್, ಜಿ.ಸಿ. ಹಾಲೇಶ್, ಎಂ.ಬಿ. ಪರಶುರಾಮಪ್ಪ, ನೀಲಕಂಠಪ್ಪ, ಟಿ.ಎಂ. ಶಂಕರಯ್ಯ, ಕೆ.ಎಂ. ಮಂಜಪ್ಪ, ಬಸಮ್ಮ, ಎಂ.ಆರ್. ನೇತ್ರಾವತಿ ಕಾರ್ಯನಿರ್ವಹಣಾಧಿಕಾರಿ ಹೆಚ್.ಬಿ.ಭೂಮೇಶ್ವರಪ್ಪ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಯಡಿಯೂರಪ್ಪಗೆ ಕೊವ್ಯಾಕ್ಸಿನ್ ಲಸಿಕೆ

**(1ನೇ ಪುಟದಿಂದ)** ಬೆಂಗಳೂರಿನ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಆಸ್ಪತ್ರೆಯಲ್ಲಿ ಪಡೆದಿದ್ದಾರೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಕೊವ್ಯಾಕ್ಸಿನ್ ಲಸಿಕೆ ಪಡೆದಿದ್ದೇನೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಅವರ ತಾಯಿ ಸಹ ಲಸಿಕೆ ಪಡೆದಿದ್ದಾರೆ.

ಲಸಿಕೆಯಿಂದ ಯಾವುದೇ ಅಡ್ಡ ಪರಿಣಾಮವಾಗುವುದಿಲ್ಲ ಕೊರೊನಾ ತಡೆಯಲು ಬೇರೆ ದಾರಿಯೇ ಇಲ್ಲ, ಪ್ರತಿಯೊಬ್ಬರೂ ಎರಡು ಡೋಸ್ ಲಸಿಕೆ ಪಡೆಯಬೇಕೆಂದು ಕರೆ ನೀಡಿದ್ದಾರೆ.

ಇದೇ ವೇಳೆ ಆರೋಗ್ಯ ಸಚಿವ ಕೆ. ಸುಧಾಕರ್ ಸಹ ಲಸಿಕೆ ಪಡೆದಿದ್ದಾರೆ. ನಂತರ ಮಾತನಾಡಿರುವ ಅವರು, ಲಸಿಕೆ ಪಡೆಯುವುದರಿಂದ ಕೊರೊನಾ ನಿಯಂತ್ರಿಸಬಹುದು ಹಾಗೂ ನಿವಾರಿಸಬಹುದು ಎಂದಿದ್ದಾರೆ.

ವೈದ್ಯರೂ ಆಗಿರುವ ಸುಧಾಕರ್, ಮುಂಚೂಣಿ ಕಾರ್ಯಕರ್ತರ ವಿಭಾಗದಲ್ಲಿ ಕೊರೊನಾ ಲಸಿಕೆ ಪಡೆದಿದ್ದಾರೆ ಎಂದು ಅವರ ಕಚೇರಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ನಗರದಲ್ಲಿ ಇಂದು ಉಪನ್ಯಾಸ

ಬಾಪೂಜಿ ವಿದ್ಯಾಸಂಸ್ಥೆಯ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಮತ್ತು ಶಿಕ್ಷಣ ತಜ್ಞರಿಗೆ ಇಂದು ಬೆಳಿಗ್ಗೆ 10 ಕ್ಕೆ ಬಿಐಇಟಿ ಆವರಣದ ಎಸ್‌ಎಸ್‌ಎಂ ಸಾಂಸ್ಕೃತಿಕ ಕೇಂದ್ರದಲ್ಲಿ 'ಹೊಸ ಶಿಕ್ಷಣ ನೀತಿ' - ಪರಿಕಲ್ಪನೆ ಮತ್ತು ಸವಾಲುಗಳ ಕುರಿತು ಉಪನ್ಯಾಸ ಏರ್ಪಡಿಸಲಾಗಿದೆ.

ಬೆಂಗಳೂರಿನ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಕೆ.ಎನ್. ಸುಬ್ರಹ್ಮಣ್ಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಲಿದ್ದಾರೆ.

ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ, ಖಜಾಂಚಿ ಎ.ಎಸ್ ನಿರಂಜನ, ಆಡಳಿತ ಮಂಡಳಿ ಸದಸ್ಯ ಡಾ. ಸಂಪನ್ನ ಮುತಾಲಿಕ್, ಬಿಐಇಟಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಭಾಗವಹಿಸಲಿದ್ದಾರೆ.

## ನಾಗರಾಜ ನಾಗಠಾಣ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ ವಾಸಿ

**ಶ್ರೀ ನಾಗರಾಜ ನಾಗಠಾಣ** ಅವರು ದಿನಾಂಕ 12.03.2021ರ ಶುಕ್ರವಾರ ಬೆಳಗಿನಜಾವ 4.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 42 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಪುತ್ರ, ತಮ್ಮ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.3.2021ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಶಾಬನೂರಿನ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

– ದುಃಖತಪ್ತ ಕುಟುಂಬ ವರ್ಗ

## ಕಾರು ಪಲ್ಟಿ: ಐವರಿಗೆ ಗಾಯ

ಕೂಡ್ಲಿಗಿ, ಮಾ.12- ಕಾರಿನ ಮುಂದಿನ ಗಾಲಿ ಪಂಕ್ಚರ್ ಆದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಪಲ್ಟಿಯಾದ ಪರಿಣಾಮ ಕಾರಿನಲ್ಲಿದ್ದ ಐವರು ಪ್ರಯಾಣಿಕರಿಗೆ ಗಾಯಗಳಾಗಿರುವ ಘಟನೆ ತಾಲ್ಲೂಕಿನ ಶಿವಪುರ ಬಳಿ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಡೆದಿದೆ.

ಅಪಘಾತದಲ್ಲಿ ಗಂಗಾವತಿಯ ಶೈಲಜಾ (65) ಎಂಬ ಮಹಿಳೆ ತಲೆಗೆ ಬಲವಾದ ಗಾಯಗಳಾಗಿದ್ದು, ಉಳಿದಂತೆ ಮಂಡಲಗಿರಿಯ ಡಾ. ಚಂದ್ರಶೇಖರ, ಕೊಡಗುಂಡಿ ಶರಣಪ್ಪ, ಅಂಗಡಿ ಮೀನಾಕ್ಷಮ್ಮ, 10 ವರ್ಷದ ಬಾಲಕ ಅಭಿಜಿತ್ ಈ ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇವರೆಲ್ಲರೂ ಒಂದೇ ಕುಟುಂಬದವರಾಗಿದ್ದು, ಕಾರಿನಲ್ಲಿ ಬೆಂಗಳೂರಿನಿಂದ ಕೊಪ್ಪಳ ಕಡೆಗೆ ಹೊರಟಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಡಾ. ಚಂದ್ರಶೇಖರ್ ತಮ್ಮ ಕುಟುಂಬದವರೊಂದಿಗೆ ಕೊಪ್ಪಳ ಜಿಲ್ಲೆಯ ಮಂಡಲಗಿರಿಗೆ ಹೊರಟಿದ್ದಾಗ ಕೂಡ್ಲಿಗಿ ತಾಲ್ಲೂಕು ಶಿವಪುರ ಹತ್ತಿರವಿರುವ ಎಲ್ ಅಂಡ್ ಟಿ ಕಂಪನಿ ಕಚೇರಿ ಸಮೀಪ ಬರುತ್ತಿದ್ದಾಗ ಕಾರಿನ ಮುಂದಿನ ಗಾಲಿ ಏಕಾಏಕಿ ಪಂಕ್ಚರ್ ಆಗಿದ್ದರಿಂದ ನಿಯಂತ್ರಣ ತಪ್ಪಿ ಕಾರು ರಸ್ತೆಯ ಪಕ್ಕದ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಸ್ಥಳೀಯರು ಕೂಡಲೇ ಗಾಯಳುಗಳನ್ನು ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲು ನೆರವಾಗಿದ್ದಾರೆ.

## ಪೈಪ್‌ಲೈನ್ ಟಿ ಕ್ಯಾಪ್ ಹಣೆಗೆ ತಗುಲಿ ಸಾವು

ಕೂಡ್ಲಿಗಿ, ಮಾ.12- ಹೊಲದಲ್ಲಿನ ಪಂಪ್‌ಸೆಟ್ ಆನ್ ಮಾಡಿದ್ದರಿಂದ ಪೈಪ್‌ಲೈನ್‌ಗೆ ಹಾಕಲಾಗಿದ್ದ ಟಿ ಕ್ಯಾಪ್, ರಭಸದ ಗಾಳಿಗೆ ಆಕಸ್ಮಿಕವಾಗಿ ಹಣೆಗೆ ಸಿಡಿದು ಬಾಲಕ ಗಾಯಗೊಂಡು ನಂತರ ಬಳ್ಳಾರಿ ವಿಮ್ಸ್‌ನಲ್ಲಿ ಸಾವನ್ನಪ್ಪಿರುವ ಘಟನೆ ಜರುಗಿದೆ.

ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಗೋವಿಂದಗಿರಿ ಗೊಲ್ಲರಹಟ್ಟಿಯ ನವೀನ್‌ಕುಮಾರ (13) ಸಾವನ್ನಪ್ಪಿರುವ ದುರ್ದೈವಿ ಬಾಲಕನಾಗಿದ್ದಾನೆ. ಈತ ಮಂಗಳವಾರ ಬೆಳಿಗ್ಗೆ ತನ್ನ ಮಾವನೊಂದಿಗೆ ಹೊಲದಲ್ಲಿನ ಬೆಳೆಗೆ ನೀರು ಹಾಯಿಸಲು ಪಂಪ್‌ಸೆಟ್ ಆನ್ ಮಾಡಿ ಪೈಪ್‌ಲೈನ್‌ಗೆ ಅಳವಡಿಸಿರುವ ಟಿ ಕ್ಯಾಪ್ ಬಿಚ್ಚುವಾಗ ಈ ಘಟನೆ ಜರುಗಿದೆ.

ನವೀನ್ ಗುರುವಾರ ಬೆಳಿಗ್ಗೆ ವಿಮ್ಸ್ ನಲ್ಲಿ ಸಾವನ್ನಪ್ಪಿದ್ದು, ಮಧ್ಯಾಹ್ನ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಮೃತ ಬಾಲಕನ ತಾಯಿ ಗೌರಮ್ಮ ನೀಡಿದ ದೂರಿನಂತೆ ಪ್ರಕರಣ ದಾಖಲಾಗಿದೆ.

## ಇಂದು ಪ.ಪೂ. ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟ

ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಶ್ರೀ ಸಿದ್ದೇಶ್ವರ ಪದವಿ ಪೂರ್ವ ಕಾಲೇಜು, ದಿ ಟೀಮ್ ಅಕಾಡೆಮಿ ಇವರುಗಳ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟ 2020-21ರ ಉದ್ಘಾಟನಾ ಸಮಾರಂಭ ಇಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸಚಿವ ಬಿ.ಎ. ಬಸವರಾಜ (ಭೈರತಿ) ನೆರವೇರಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎನ್. ಲಿಂಗಣ್ಣ, ಎಂ.ಪಿ. ರೇಣುಕಾಚಾರ್ಯ, ಕೆ.ವಿ. ಶಾಂತಕುಮಾರಿ ಶಶಿಧರ್, ಜಿ.ಎಂ. ಸಿದ್ದೇಶ್ವರ, ಡಾ. ಶಾಮನೂರು ಶಿವಶಂಕರಪ್ಪ, ಜಿ. ರಘು ಆಚಾರ್, ಆರ್. ಪ್ರಸನ್ನಕುಮಾರ್, ಲಹರ್‌ಸಿಂಗ್ ಸಿರೋಯಾ, ಮೋಹನ್‌ಕುಮಾರ್ ಕೊಂಡಜ್ಜಿ, ಎಸ್. ರಾಮಪ್ಪ, ಕೆ.ಪಿ. ನಂಜುಂಡಿ ವಿಶ್ವಕರ್ಮ, ರವಿಕುಮಾರ್ ಎನ್, ಆಯನೂರು ಮಂಜುನಾಥ, ಎಸ್.ಎಲ್. ಭೋಜೇಗೌಡ, ಡಾ. ವೈ.ಎ. ನಾರಾಯಣಸ್ವಾಮಿ, ಚಿದಾನಂದ ಎಂ ಗೌಡ, ಎಸ್.ಟಿ. ವೀರೇಶ್, ಎನ್.ಎಚ್. ಶಿವಕುಮಾರ್ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಮಹಂತೇಶ್ ಬೀಳಗಿ, ಹನುಮಂತರಾಯ, ಸ್ನೇಹಲ್ ಆರ್, ಸುರೇಶ್ ಕೆ. ಎಸ್., ಪಾಲಾಕ್ಷಿ ಬಿ, ರವಿ ಸಿ.ಬಿ, ಪರಮೇಶ್ವರಪ್ಪ ಕೆ.ಎಂ, ಸಂತೋಷ ಎಂ.ಇ ಆಗಮಿಸುವರು.

# ಚಿರಂತನದಿಂದ 'ಕರ್ನಾಟಕ ಮಹಿಳಾ ಶ್ರೇಷ್ಠ ಪ್ರಶಸ್ತಿ ಪ್ರದಾನ' ಸಮಾರಂಭ

ದಾವಣಗೆರೆ, ಮಾ. 12- ಚಿರಂತನ ಅಕಾಡೆಮಿಯಿಂದ ಇದೇ 14ರ ಭಾನುವಾರ ಸಂಜೆ 6 ಗಂಟೆಗೆ ನಗರದ ಶಿವಯೋಗಿ ಮಂದಿರದ ಆವರಣದಲ್ಲಿ 'ಕರ್ನಾಟಕ ಮಹಿಳಾ ಶ್ರೇಷ್ಠ ಪ್ರಶಸ್ತಿ ಪ್ರದಾನ ಸಮಾರಂಭ' ಹಮ್ಮಿಕೊಂಡಿರುವುದಾಗಿ ಸಂಸ್ಥಾಪಕ ಅಧ್ಯಕ್ಷೆ ಎನ್.ದೀಪಾ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ದಾವಣಗೆರೆಯಲ್ಲಿ ಕಳೆದ 19 ವರ್ಷಗಳಿಂದ ಸಕ್ರಿಯವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವ 'ಚಿರಂತನ' ಈ ಬಾರಿ ವಿಶೇಷವಾಗಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ವಿದ್ಯಾಕ್ಷೇತ್ರ, ಸ್ವ ಉದ್ಯೋಗ, ಸಂಗೀತ, ನೃತ್ಯ, ಕ್ರೀಡೆ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿ ಯಶಸ್ವಿಯಾಗಿರುವ ರಾಜ್ಯದ 25 ಮಹಿಳೆಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 138 ಮಹಿಳೆಯರು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದ್ದು, ಅವರಲ್ಲಿ 25 ಜನರನ್ನು ಆಯ್ಕೆ ಮಾಡಿರುವುದಾಗಿ ದೀಪಾ ಹೇಳಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಲಿದ್ದು, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿ ಉಪ ಕುಲಪತಿ ಪ್ರೊ.ಬಿ.ಕೆ. ತುಳಸಿ ಮಾಲಾ, ಮೈಸೂರು ವಿವಿ ಪ್ರದರ್ಶಕ ಕಲೆಗಳ ವಿಭಾಗದ ಸಹಾಯಕ ಡೀನ್ ಡಾ. ಶೀಲಾ ಶ್ರೀಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ದುಬೈ ಕನ್ನಡಿಗರ ಸಂಘದ ಅಧ್ಯಕ್ಷೆ ಉಮಾ ವಿದ್ಯಾಧರ್ ಇತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಲಕಾನಂದ, ರತನ್, ಪೂಜಾ ವೆಂಕಟೇಶ್ ಉಪಸ್ಥಿತರಿದ್ದರು.

**ಪ್ರಶಸ್ತಿಗೆ ಆಯ್ಕೆಯಾದವರು:**

ಸ್ಟಾನಿಯಾ ಡೆಬೋರಾ ಪೆರಿಸ್ (ಕ್ರೀಡೆ), ಅನಿತಾ ಹೆಚ್.ಎಸ್. (ಶಿಕ್ಷಣ), ಮೃದುಲ ಶ್ರೀಧರ್ (ಶಿಕ್ಷಣ ಮತ್ತು ಉದ್ಯಮಿ), ಶೋಭ ಯದುರಾಜ್ (ಕಾನೂನು ಮತ್ತು ಉದ್ಯಮಿ), ಹೇಮಾ ನಿರಂಜನ್ (ಉದ್ಯಮ), ಡಾ.ಶ್ರೀ ವಿದ್ಯಾ ನಾಗರಾಜ್ (ಆರೋಗ್ಯ ಸೇವೆ), ಡಾ.ಶಶಿಕಲಾ ಕೃಷ್ಣಮೂರ್ತಿ (ಆರೋಗ್ಯ ಸೇವೆ) ರಶ್ಮಿ ಎಸ್. (ಪತ್ರಿಕೋದ್ಯಮ) ಪುಷ್ಪ ಎಂ.ಎಂ. (ಸಮಾಜ ಸೇವೆ), ಅರುಣ ಹೆಚ್. (ಸಮಾಜ ಸೇವೆ), ರೂಪ ಜಿ.ಎಂ. (ಸಮಾಜ ಸೇವೆ), ಸುವರ್ಣ ಸತೀಶ್ (ಸಮಾಜ ಸೇವೆ), ಲತಿಕ ಡಿ.ಶೆಟ್ಟಿ (ಸಮಾಜ ಸೇವೆ ಮತ್ತು ತರಬೇತಿ), ಭಾಗೀರಥಿ ಕನ್ನಡತಿ (ಯೋಗ), ಉಮಾ ವಿದ್ಯಾಧರ್ (ಕನ್ನಡ ಸೇವೆ), ಡಾ.ಶೈಲಜಾ ಪಂತುಲು (ಸಂಗೀತ), ಶ್ರೀಮತಿ ನಂದಿನಿ ಶಿವಪ್ರಕಾಶ್ (ನೃತ್ಯ), ದೀಪಾ ಭಟ್ (ನೃತ್ಯ), ರೋಹಿಣಿ ಇಮಾರತಿ (ನೃತ್ಯ), ನಿರ್ಮಲ ಜಗದೀಶ್ (ನೃತ್ಯ), ಪೂರ್ಣಿಮಾ ಎಂ.ಎಸ್ (ಚಿತ್ರಕಲೆ).

# ಪಶು-ಪಕ್ಷಿಗಳಿಗೆ ನೀರಿನಾಸರೆ ಕಲ್ಪಿಸಿದ ಯುವ ಪಡೆ

**ಮಂಜು ಮಯೂರ**



ಕೂಡ್ಲಿಗಿ, ಮಾ.10- ಸಮೀಪದ ಗಜಾಪುರ ಕಾಡಿನಲ್ಲಿ ಬೇಸಿಗೆ ಬಂತೆಂದರೆ ಪ್ರತಿವರ್ಷ ಕುಡಿಯಲು ನೀರು ಸಿಗದಂತಹ ಪರಿಸ್ಥಿತಿ ಇದೆ.

ಕಳೆದ 3 ವರ್ಷಗಳಿಂದ ಗಜಾಪುರ ಗ್ರಾಮದ ಸ್ಥಳೀಯ ಯುವಕರು ತಳವಾರ ಶಿವರಾಜ ಎನ್ನುವ ಯುವಕನ ನೇತೃತ್ವದಲ್ಲಿ ಬಾವಿಯಾಕಾರದ ಬಂಡೆಗಳ ಮೇಲೆ ಟ್ಯಾಂಕರ್ ಮೂಲಕ ನೀರು ತುಂಬಿಸಿ ಪ್ರಾಣಿ,ಪಕ್ಷಿಗಳು, ಜೀವಿ ಸಂಕುಲಕ್ಕೆ ನೀರಿನ ದಾಹ ತಣಿಸಲು ಮುಂದಾಗುವ ಮೂಲಕ ಮಾದರಿಯಾಗಿದ್ದಾರೆ.

ಗಜಾಪುರ ಸಮೀಪ ಸಹಸ್ರಾರು ಹೆಕ್ಟೇರ್ ಕಾದಿಟ್ಟ ಅರಣ್ಯವಿದ್ದು ಇಲ್ಲಿ ಕಾಡು ಹಂದಿ, ಮೊಲ,ಕರಡಿಗಳು ಸೇರಿದಂತೆ ವಿವಿಧ ರೀತಿಯ ಸರಿಸೃಪಗಳು, ಪಕ್ಷಿಗಳು, ಪ್ರಾಣಿಗಳು ವಾಸವಾಗಿದ್ದು, ಬೇಸಿಗೆ ಬಂತೆಂದರೆ ಕಾಡಿನಲ್ಲಿ ಕುಡಿಯಲು ನೀರು ಸಿಗುವುದಿಲ್ಲ. ಇದನ್ನರಿತ ಗಜಾಪುರ ಗ್ರಾಮದ ಯುವಕರು ಹಾಗೂ ಬಾಲಕರು ಟ್ಯಾಂಕರ್ ಮೂಲಕ ನೀರನ್ನು ತಂದು ದೊಡ್ಡ ಹೊಂಡಗಳ ತರಹ ಇರುವ ಬಂಡೆಗಳ ಮೇಲೆ ನೀರನ್ನು ತುಂಬಿಸುವ ಮೂಲಕ ಪ್ರಾಣಿ, ಪಕ್ಷಿಗಳ ದಾಹ ತಣಿಸುವ ಕೆಲಸ ಮಾಡುತ್ತಿದ್ದಾರೆ.

ಟ್ಯಾಂಕರ್ ನೀರಿಗೆ ಆಗುವ ಖರ್ಚನ್ನು ಯುವಕರೇ ಭರಿಸುತ್ತಿದ್ದು, ಊರ ಮುಖಂಡರು ಸಹ ಖರ್ಚು ನೀಡುವ ಮೂಲಕ ಯುವಕರ ಕೆಲಸಕ್ಕೆ ಬೆನ್ನು ತಟ್ಟುತ್ತಿದ್ದಾರೆ. ಬಂಡೆಯ ಮೇಲೆ ನೀರು ಖಾಲಿ ಆದ ತಕ್ಷಣ ಮತ್ತೊಂದು ಟ್ಯಾಂಕರ್ ನೀರು ತಂದು ತುಂಬಿಸುತ್ತಾರೆ. ಮಳೆಬರುವವರೆಗೂ ಈ ರೀತಿಯ ವನ್ಯಜೀವಿಗಳ ಬಗ್ಗೆ ಕಾಳಜಿ ಮೆರೆಯುವ ಯುವಕರು ಇತರರಿಗೆ ಮಾದರಿಯಾಗಿದ್ದಾರೆ.

ಹಿಂದಿನ ಕೂಡ್ಲಿಗಿ ವಲಯ ಅರಣ್ಯಾಧಿಕಾರಿ ರೇಣುಕಾ ಅವರ ಕಟ್ಟುನಿಟ್ಟಿನ ಕ್ರಮದಿಂದ ಅರಣ್ಯ ಅಭಿವೃದ್ಧಿ ಹೊಂದಿದ್ದು, ಕಾಡು ಪ್ರಾಣಿಗಳು ಸಹ ಹೆಚ್ಚಾಗಿವೆ. ಗಜಾಪುರ ಸಮೀಪದ ಕಾಡಿನಲ್ಲಿ ಅಂಕನ ಡೋಣಿ ಎಂಬ ಬಂಡೆಯ ಮೇಲೆ 5 ರಿಂದ 6 ಚಿಕ್ಕ ಚಿಕ್ಕ ಡೋಣಿಯಾಕಾರದ ಬಾವಿಗಳಿವೆ. ಈ ಬಂಡೆಯ ಮೇಲಿನ ತಗ್ಗುಗಳಲ್ಲಿ ಒಂದು ಟ್ಯಾಂಕರ್ ನೀರು ತುಂಬಬಹುದು. ಈ ನೀರು 10 ರಿಂದ 15 ದಿನಗಳವರೆಗೆ ಅರಣ್ಯದಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಆಗುತ್ತದೆ. ನಂತರ ನೀರು ಖಾಲಿಯಾಗುವುದನ್ನು ಆಗಾಗ್ಗೆ ಗಮನಿಸುತ್ತಿರುವ ಶಿವರಾಜ ಮತ್ತು ತಂಡದವರು ಟ್ಯಾಂಕರ್ ಮೂಲಕ ನೀರು ತುಂಬಿಸಿ ನೀರು ಖಾಲಿಯಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ತಳವಾರ ಶಿವರಾಜ ಅವರ ಜೊತೆಗೆ ಯುವಕರಾದ ಅಂಗಡಿ ಕೊಟ್ರಪ್ಪ, ನಾಣ್ಯಾಪುರ ಮಾರುತಿ, ಕಾಳಾಪುರ ಪವನ್, ಬಣಕಾರ ಗುರುವಪ್ಪ, ವಿದ್ಯಾರ್ಥಿಗಳಾದ ಡಿ. ಮಾರುತಿ, ತುಪ್ಪಾನಹಳ್ಳಿ ಮಾರುತಿ, ಕೆ. ಮಾರುತಿ, ಕೊಟ್ರೇಶ್ ಕೈ ಜೋಡಿಸಿದ್ದಾರೆ. ಜೊತೆಗೆ ಊರ ಮುಖಂಡರು ಸಹ ಸ್ಪಂದಿಸುತ್ತಿರುವುದು ವಿಶೇಷ.

ಕಳೆದ ಮೂರು ವರ್ಷಗಳಿಂದ ತಗ್ಗಿರುವ ಬಂಡೆಗಳಿಗೆ ನೀರು ತುಂಬುವ ಮೂಲಕ ಪ್ರಾಣಿ, ಪಕ್ಷಿಗಳಿಗೆ ನೀರನ್ನು ಪೂರೈಕೆ ಮಾಡುತ್ತೇವೆ. ನಮ್ಮಂತೆ ಪ್ರಾಣಿ, ಪಕ್ಷಿಗಳಿಗೂ ಬದುಕುವ ಹಕ್ಕಿದೆ. ಇದನ್ನರಿತು ನಾವು ಕೆಲಸ ಮಾಡುತ್ತಿದ್ದೇವೆ ಎನ್ನುತ್ತಾರೆ ಮೂರು ವರ್ಷಗಳಿಂದ ಪ್ರಾಣಿ ಪಕ್ಷಿಗಳಿಗೆ ನೀರು ಸರಬರಾಜು ಮಾಡುತ್ತಿರುವ ಗಜಾಪುರ ಗ್ರಾಮದ ಯುವಕ ತಳವಾರ ಶಿವರಾಜ.

ನಮ್ಮೂರಿನಲ್ಲಿ ಯುವಕರ ಈ ಕೆಲಸ ಹೆಮ್ಮೆ ತಂದಿದೆ. ನಾವು ಕೂಡ ಪ್ರತಿವರ್ಷ ಟ್ಯಾಂಕರ್ ನೀರಿನ ಖರ್ಚನ್ನು ನೀಡುವ ಮೂಲಕ ಯುವಕರಿಗೆ ಸ್ಫೂರ್ತಿ ನೀಡುತ್ತಿದ್ದೇವೆ ಎನ್ನುತ್ತಾರೆ ಗಜಾಪುರ ಗ್ರಾಮದ ಗ್ರಾ.ಪಂ. ಮಾಜಿ ಸದಸ್ಯ ಬೆಳದೇರಿ ಮಲ್ಲಿಕಾರ್ಜುನ್.

## ದಾವಣಗೆರೆ ವಿವಿಯಲ್ಲಿ ಕಾರ್ಯಾಗಾರ



ದಾವಣಗೆರೆ, ಮಾ.12- ದಾವಣಗೆರೆ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗದ ವತಿಯಿಂದ ಎಂಬಿಎ ಸಭಾಂಗಣದಲ್ಲಿ ಒಂದು ದಿನದ ಮಾನವ ಸಂಪನ್ಮೂಲ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಮಹಾರಾಜ ಸೋಪ್ಸ್ ಪ್ರೈ. ಲಿ. ವ್ಯವಸ್ಥಾಪಕ ನಿರ್ದೇಶಕ ಡಾ. ಬಿ.ಇ. ರವಿರಾಜ್ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಪದವಿ ಜೊತೆಗೆ ಫೀಲ್ಡ್‌ವರ್ಕ್ ಮತ್ತು ಪ್ರಾಯೋಗಿಕ ಅಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ್ ಮಾತನಾಡಿದರು. ಕುಲಸಚಿವ ಪ್ರೊ. ಗಾಯತ್ರಿ ದೇವರಾಜ್, ಎನ್. ರಾಜ, ಜಯರಾಮ್, ಅಶೋಕ್, ವಿಠ್ಠಲ್, ನಿಲ್ ವಿನ್ಸೆಂಟ್, ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎಚ್.ಎಸ್. ಅನಿತಾ, ಹಣಕಾಸು ಅಧಿಕಾರಿ ಡಿ. ಪ್ರಿಯಾಂಕ ಹಾಗೂ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

## ಎಸ್.ಕೆ. ಸ್ವಾಮಿ ಅವರಿಗೆ ಬೀಳ್ಕೊಡುಗೆ



ದಾವಣಗೆರೆ, ಮಾ.12- ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ ಶಿವಮೊಗ್ಗ ಜಿಲ್ಲೆ ಸೊರಬ ಸಾರ್ವಜನಿಕ ಆಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ಎಸ್.ಕೆ. ಸ್ವಾಮಿ ಅವರಿಗೆ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಬಿ. ಶ್ರೀನಿವಾಸ ನಾಯಕ, ಪ್ರಧಾನ ಕಾರ್ಯದರ್ಶಿ ಗೋವಿಂದರಾಜು, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಜಿ. ಅಣ್ಣಪ್ಪ, ಶ್ರೀನಿವಾಸ, ಹೇಮಣ್ಣ, ಹಾಲಪ್ಪ, ಹರೀಶ, ಶಿವಮೂರ್ತಿ ಇವರುಗಳು ಉಪಸ್ಥಿತರಿದ್ದರು.

## ಮೇ 21 ರಿಂದ ಕೃಷಿ ಎಕ್ಸ್‌ಪೋ-2021

ದಾವಣಗೆರೆ, ಮಾ. 12- ಆಗ್ರೋ ಇಂಡಿಯಾ ಸಂಸ್ಥೆ ವತಿಯಿಂದ ಮೇ 21 ರಿಂದ ಮೂರು ದಿನಗಳ ಕಾಲ ನಗರದ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ 'ಕೃಷಿ ಎಕ್ಸ್‌ಪೋ-2021' ಕೃಷಿ ಮೇಳ ಹಮ್ಮಿಕೊಂಡಿರುವುದಾಗಿ ಮುಖ್ಯ ಆಯೋಜಕ ವಿ.ಆರ್. ರವಿಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿಯೇ ಅತಿ ದೊಡ್ಡ ಕೃಷಿ ವಸ್ತು ಪ್ರದರ್ಶನ ಇದಾಗಿದ್ದು, ಕೃಷಿಗೆ ಸಂಬಂಧಪಟ್ಟ 200ಕ್ಕೂ ಹೆಚ್ಚು ಕಂಪನಿಗಳು, ಕೃಷಿ, ತೋಟಗಾರಿಕೆ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ಅಭಿವೃದ್ಧಿ ಸಂಸ್ಥೆಗಳೂ ಸಹ ಮೇಳದಲ್ಲಿ ಭಾಗವಹಿಸಿ, ರೈತರಿಗೆ ಮಾಹಿತಿ ನೀಡಲಿವೆ ಎಂದು ಹೇಳಿದರು.

ಸಮಗ್ರ ಬೆಳೆ, ಪೋಷಕಾಂಶ ಹಾಗೂ ಪೀಡನೆ ನಿರ್ವಹಣೆ, ಸಾವಯವ ಕೃಷಿ, ಜೈವಿಕ ಗೊಬ್ಬರ, ಮಳೆ ನೀರು ಕೊಯ್ಲು, ಅಂತರ್ಜಲ ಮರುಪೂರ್ಣ, ರೈತರ ಆವಿಷ್ಕಾರಗಳು, ಕೃಷಿ ತಂತ್ರಜ್ಞರೊಂದಿಗೆ ಸಂವಾದ, ಹೈಟೆಕ್ ತೋಟಗಾರಿಕೆ, ಮಣ್ಣು ರಹಿತ ಬೇಸಾಯ, ದ್ವಿದಳ ಧಾನ್ಯಗಳ ಉತ್ಪಾದನೆ, ಮಹಿಳೆಯರ ಸಬಲೀಕರಣಕ್ಕೆ ಗೃಹ ವಿಜ್ಞಾನ ತಾಂತ್ರಿಕತೆ ಇತ್ಯಾದಿ ವಿಷಯಗಳ ಕುರಿತು ಮಾಹಿತಿ ಸಿಗಲಿದೆ ಎಂದರು.

ಮೇಳದಲ್ಲಿ ಮಳಿಗೆಗಳನ್ನು ಕಾಯ್ದಿರಿಸಲು ಮೊ.7204703294, 9035123092ಗೆ ಸಂಪರ್ಕಿಸುವಂತೆ ಅವರು ಕೋರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಡಾ.ಮಂಜುನಾಥ್, ಪ್ರೊ.ಚಂದ್ರಪ್ಪ, ಡಾ.ಪ್ರಕಾಶ್, ಹಾಲೇಶ ನಾಯ್ಕ ಉಪಸ್ಥಿತರಿದ್ದರು



## ಮನದ ಮಂಥನ...

ಮನದ ಮಂಥನವಾಗದೊಡೆ
ಮನವು ತಿಳಿಯಾಗದು
ಭೂಮಿಯೊಳು ಬೀಜವ ಬಿತ್ತದೊಡೆ
ಧರೆಯು ಶುಭಫಲವನೆಂದೂ ನೀಡದು.
ಕಂದನು ರೋದಿಸದಿದ್ದೊಡೆ
ಕಂದನ ಉದರವೆಂದೂ ತುಂಬದು.
ಸಂಕಲ್ಪಿಸಿ ಕರ್ಮವ ಮಾಡದಿದ್ದೊಡೆ
ಕಾರ್ಯದಲಿ ಜಯಸಿಗದೆಂದನು
ನಮ್ಮ ವೀರೇಶ್ವರ.

**- ಈರಪ್ಪ ಬಿಜಲಿ**

## ಎಸ್‌ಪಿಬಿ ಸ್ಮರಣಾರ್ಥ : ನಗರದಲ್ಲಿ ಇಂದು 'ಗೀತ ನಮನ'



ಚಲನಚಿತ್ರ ಅಭಿಮಾನಿಗಳ ಕ್ರಿಯಾತ್ಮಕ ಸಂಸ್ಥೆ 'ಸಿನಿಮಾ ಸಿರಿ' ವತಿಯಿಂದ ಇಂದು ಸಂಜೆ 6 ಗಂಟೆಗೆ ನಗರದ ಶಿವಯೋಗ ಮಂದಿರದ ಆವರಣದಲ್ಲಿ ಸಂಗೀತ ಸಾಮ್ರಾಟ್ ದಿ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಸ್ಮರಣಾರ್ಥ 'ಗೀತ ನಮನ' ಕಾರ್ಯಕ್ರಮ ನಡೆಯಲಿದೆ ಎಂದು ಸಂಸ್ಥೆ ಅಧ್ಯಕ್ಷ ಟಿ.ಎಂ. ಪಂಚಾಕ್ಷರಯ್ಯ ಹಾಗೂ ಸಂಸ್ಥೆಯ ಪರಿಕಲ್ಪನೆ ನಿರ್ದೇಶಕ ಸುರಭಿ ಶಿವಮೂರ್ತಿ ತಿಳಿಸಿದ್ದಾರೆ.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕೊರೊನಾ ಸಂಕಷ್ಟದ ದಿನಗಳಲ್ಲಿ ಸಾಮಾಜಿಕ ಕಾಳಜಿಯೊಂದಿಗೆ ಕೊರೊನಾ ತಡೆಗೆ ಹಗಲಿರುಳು ಶ್ರಮಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಎಸ್ಪಿ ಹನುಮಂತರಾಯ ಅವರನ್ನು ಸನ್ಮಾನಿಸಲಾಗುವುದು ಎಂದರು.

ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಧಾರುಣ ಸಾವನ್ನಪ್ಪಿದ ನಗರದ 10 ಜನ ವನಿತೆಯರಿಗೆ 'ಮರೆಯಲಾಗದ ಮಾಣಿಕ್ಯ' ಶೀರ್ಷಿಕೆಯಡಿ ಪುಷ್ಪಾಂಜಲಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಎಸ್‌ಪಿಬಿ ಅವರ ಆಯ್ಕೆಯ ಕೆಲವು ಮಧುರಗೀತೆಗಳನ್ನು ಭದ್ರಾ ವತಿಯ ತೃಪ್ತಿ ಮೆಲೋಡಿಯಸ್ ಕಲಾವಿದರು ಮತ್ತು ಸ್ಥಳೀಯ ಕಲಾವಿದ ರಾದ ಸಂಗೀತ ರಾಘವೇಂದ್ರ, ಜಗದೀಶ್ ಎಂ.ಜಿ., ಪೂಜಾ, ಆರ್.ಟಿ. ಮೃತ್ಯುಂಜಯ ಅವರು ಸುಮಧುರ ಗೀತೆಗಳನ್ನು ಹಾಡಲಿದ್ದಾರೆ ಎಂದರು.

## ರೇಣುಕಾಚಾರ್ಯ ಜಯಂತಿ : ನಗರದಲ್ಲಿ ಇಂದು ಸಭೆ

ಅಖಿಲ ಭಾರತ ಜಂಗಮ ಮಹಾಸಭಾ, ಕರ್ನಾಟಕ ರಾಜ್ಯ ಬೇಡ ಜಂಗಮ ಮಹಾಸಭಾ ವತಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಆಚರಿಸಲು ನಿರ್ಧರಿಸಲಾಗಿದೆ.

ಈ ಪ್ರಯುಕ್ತ ಇಂದು ಸಂಜೆ 5.30 ಕ್ಕೆ ಡಾ. ಸದ್ಯೋಜಾತ ಶಿವಾಚಾರ್ಯರ ಹಿರೇಮಠದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ. ಎಲ್ಲಾ ವೀರಶೈವ ಸಮಾಜ ಬಾಂಧವರು, ಮುಖಂಡರು ಸಭೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ವಿವರಕ್ಕೆ ಸಂಪರ್ಕಿಸಿ : 94495-69166, 96636-22055, 94484-43095.

## ಬೀರೇಶ್ವರ ಗುಡಿಗೆ ಆಡಳಿತಾಧಿಕಾರಿ ನೇಮಕ

### ಉಚ್ಚ ನ್ಯಾಯಾಲಯ ತಡೆ

ರಾಣೇಬೆನ್ನೂರು, ಮಾ.12- ಮೆಡ್ಲೇರಿ ಶ್ರೀ ಬೀರೇಶ್ವರ ದೇವಸ್ಥಾನಕ್ಕೆ ಆಡಳಿತಾಧಿಕಾರಿ ನೇಮಕ ಮಾಡಲಾಗಿದ್ದ ಸರ್ಕಾರದ ಆದೇಶಕ್ಕೆ ಧಾರವಾಡ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದು ಸಮಿತಿಯ ಕಾರ್ಯದರ್ಶಿ ಡಿಳ್ಳೆಪ್ಪ ಅಣ್ಣೇರ ತಿಳಿಸಿದ್ದಾರೆ.

ಸಹಕಾರಿ ಇಲಾಖೆಯಲ್ಲಿ ನೋಂದಣಿ ಆದ ನಮ್ಮ ಸಮಿತಿಯನ್ನು ಇಲ್ಲಿನ ಶಾಸಕ ಅರುಣ ಕುಮಾರ ಪೂಜಾರ ಹಾಗೂ ಸಚಿವ ಶಂಕರ್ ಅವರು ಕಂದಾಯ ಇಲಾಖೆ ಅಧಿಕಾರಿಗಳಿಂದ ಆಡಳಿತಾಧಿಕಾರಿ ನೇಮಿಸಿ, ಆರು ತಿಂಗಳೊಳಗೆ ಚುನಾವಣೆ ನಡೆಸಿ ಹೊಸ ಸಮಿತಿಗೆ ಆಡಳಿತ ವಹಿಸುವಂತೆ ಹೊರಡಿಸಿದ ಸರ್ಕಾರದ ಆದೇಶವನ್ನು ನ್ಯಾಯಾಲಯ ತಡೆ ಹಿಡಿದಿದೆ ಎಂದು ಡಿಳ್ಳೆಪ್ಪ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ಕಮಿಟಿಯವರು ಯಾವುದೇ ಅವ್ಯವಹಾರ ಮಾಡಿಲ್ಲ. ಕಾನೂನು ಬಾಹಿರ ಆಡಳಿತ ನಡೆಸಿಲ್ಲ. ಅಲ್ಲದೆ ಶಿವರಾತ್ರಿ ಜಾತ್ರೆಯ ಈ ಸಮಯದಲ್ಲಿ ರಾಜಕೀಯ ಕುತಂತ್ರ ನಡೆಸಿ, ಅಪಾರ ಸಂಖ್ಯೆಯ ಸ್ವಾಮಿಯ ಭಕ್ತರ ಮನದಲ್ಲಿ ಅಶಾಂತಿ ಮೂಡಿಸಿದ ಶಾಸಕರು ಹಾಗೂ ಸಚಿವರು ತಮ್ಮ ಮುಂಬರುವ ಚುನಾವಣೆಗಳಲ್ಲಿ ಹೀನಾಯ ಸೋಲಿಗೆ ದಾರಿ ಮಾಡಿಕೊಂಡಿದ್ದಾರೆ. ಈಗಲೂ ಸಹ ಈರ್ವರೂ ತಮ್ಮ ತಪ್ಪು ಅರಿತುಕೊಳ್ಳದಿದ್ದಲ್ಲಿ ಈಗಿನಿಂದಲೇ ಇವರ ವಿರುದ್ಧ ಹೋರಾಟ ಪ್ರಾರಂಭಿಸಲಾಗುವುದು ಎಂದು ಡಿಳ್ಳೆಪ್ಪ ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ರವೀಂದ್ರಗೌಡ ಪಾಟೀಲ, ಸಮಿತಿ ಅಧ್ಯಕ್ಷ ಗೋರಜ್ಜ ಗೊರಮಾಳರ, ಉಪಾಧ್ಯಕ್ಷ ನಾಗಪ್ಪ ಪೂಜಾರ, ಸದಸ್ಯರಾದ ಬೀರೇಶ ಕೂನಬೇವು, ವಿಷ್ಣಪ್ಪ ಪೂಜಾರ, ಮಹಾಲಿಂಗಪ್ಪ ಹಾಡೋರ ಇನ್ನಿತರರಿದ್ದರು.

**ಬೇಕಾಗಿದ್ದಾರೆ**

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

**ಉಚಿತ ಕ್ಯಾನ್ಸರ್ ತಪಾಸಣೆ**

ದಿನಾಂಕ : ಮಾರ್ಚ್ 14 ರಂದು
ಬೆಳಿಗ್ಗೆ 8.00 ರಿಂದ ಮಧ್ಯಾಹ್ನ 12.00 ರವರೆಗೆ
ಯಾವುದೇ ರೀತಿಯ ಕ್ಯಾನ್ಸರ್ ಸಮಸ್ಯೆಗಳಿದ್ದಲ್ಲಿ
(Breast, Lung, Colon, Blood related. Prostate, Kidney, bladder, Leukaemia, lymphoma, multiple myelome etc....Ovary Uterine Ca.)
ಇನ್ನಿತರೇ ಯಾವುದೇ ರೀತಿಯ ಕ್ಯಾನ್ಸರ್‌ಗೆ ಸಂಬಂಧಿಸಿದ ತೊಂದರೆಗಳಿದರೆ)
ಬೆಂಗಳೂರಿನ ನಾರ್ತ್ ಸೈಡ್ ಮಣಿಪಾಲ್ ಆಸ್ಪತ್ರೆಯ ಕ್ಯಾನ್ಸರ್ ರೋಗ ತಜ್ಞರಾದ ಡಾ|| ರುದ್ರೇಶ್ ಎ.ಹೆಚ್. ರವರು ಉಚಿತವಾಗಿ ಕ್ಯಾನ್ಸರ್ ತಪಾಸಣೆ ಕ್ಯಾಂಪನ್ನು ಇದೇ ಭಾನುವಾರ ಹಮ್ಮಿಕೊಂಡಿರುತ್ತಾರೆ. ಅವಶ್ಯವಿರುವ ರೋಗಿಗಳು ಇವರ ಸೇವೆಯನ್ನು ಪಡೆದುಕೊಳ್ಳಬಹುದಾಗಿದೆ.

ವಿಳಾಸ : ಹರೀಶ್ ನ್ಯೂರೋ ಕ್ಲಿನಿಕ್
# 384/2, 4ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಎದುರಿನ ಅಡ್ಡ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಸಂಪರ್ಕಿಸಿ : ಡಾ|| ರುದ್ರೇಶ್ ಎ.ಹೆಚ್. ಫೋ. : 94803 69521
ಹರೀಶ್ ನ್ಯೂರೋ ಕ್ಲಿನಿಕ್, ಫೋ. : 94802 25635

# ಸಾಮಾಜಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳನ್ನು ಬೆಸೆಯುತ್ತಿರುವುದು ಸ್ವಾಗತಾರ್ಹ : ಮಹಾಪೌರ ವೀರೇಶ್



ದಾವಣಗೆರೆ, ಮಾ. 12- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಕರ್ನಾಟಕದ ಶೈಕ್ಷಣಿಕ ಇತಿಹಾಸದಲ್ಲಿ ತನ್ನದೇ ಆದ ಪ್ರತ್ಯೇಕ ಇತಿಹಾಸವಿದೆ. ಕೇವಲ ಅಂಕಪಟ್ಟಿಯ ಪದವಿ ನೀಡದೆ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ವಿಶ್ವವಿದ್ಯಾನಿಲಯವನ್ನು ಜೋಡಿಸಿಕೊಳ್ಳುತ್ತಿರುವುದು, ವಿದ್ಯಾರ್ಥಿಗಳನ್ನು ಬೆಸೆಯುತ್ತಿರುವುದು ಸ್ವಾಗತಾರ್ಹ ಸಂಗತಿ ಎಂದು ಮಹಾನಗರಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ದಾವಣಗೆರೆ ಪ್ರಾದೇಶಿಕ ಕೇಂದ್ರ ತನ್ನ ವ್ಯಾಪ್ತಿಯ ಎಂಬಿಎ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಶುಭ ಹಾರೈಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಗತ್ತಿನ ಬೇರೆ ಯಾವುದೇ ದೇಶದ ವಿದ್ಯಾರ್ಥಿಗಳಿಗೆ ಇಲ್ಲದ ಜವಾಬ್ದಾರಿ ಭಾರತೀಯ ವಿದ್ಯಾರ್ಥಿಗಳಿಗೆ ಇದೆ. ಕಾರಣ, ಭಾರತ ತನ್ನ ನಾಗರಿಕತೆ ಮತ್ತು ಸಂಸ್ಕೃತಿಯ ಪ್ರಸರಣಕ್ಕಾಗಿ ವಿಶ್ವದಲ್ಲಿ ಪ್ರಸಿದ್ಧಿ ಹೊಂದಿದೆ ಎಂದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ಶಶಿಧರ್, ಅಧ್ಯಕ್ಷತೆ ವಹಿಸಿದ್ದ ಪ್ರಾದೇಶಿಕ ನಿರ್ದೇಶಕ ಡಾ.ಸುಧಾಕರ ಹೊಸಳ್ಳಿ , ಪ್ರಸ್ತುತ ಕುಲಪತಿಗಳಾದ ಪ್ರೊ. ವಿದ್ಯಾಶಂಕರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಒಯು ಪ್ರಾಧ್ಯಾಪಕ ಡಾ.ಚಿನ್ನಯ್ಯ, ಆರ್‌ಎಲ್ ಲಾ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಪವನ್ ಮತ್ತು ದಾವಣಗೆರೆ ವಿವಿಯ ಪ್ರಾಧ್ಯಾಪಕ ರಮೇಶ್ ಚಂದ್ರಹಾಸ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು ಹಾಗೂ ರವಿ, ಮಂಜುನಾಥ್ ಮತ್ತಿತರರು ಹಾಜರಿದ್ದರು.

# ಕುರುಬ ನಿಗಮ ಬೇಕು, ಮೀಸಲಾತಿಗೆ ಸಮಿತಿ ಬೇಡ

### ಮುಖ್ಯಮಂತ್ರಿಗೆ ಹಾಲುಮತ ಸಭಾ ಆಗ್ರಹ

ದಾವಣಗೆರೆ, ಮಾ. 12 - ಕುರುಬರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂಬ ಬೇಡಿಕೆ ಇಟ್ಟಿದ್ದರೂ ಸಹ, ಆ ಬಗ್ಗೆ ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ಹಾಲುಮತ ಮಹಾಸಭಾ ಆಕ್ಷೇಪಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಮಹಾ ಸಭಾ, ಮುಂದುವರೆದ ಜಾತಿಗಳಿಗೆ ಬಜೆಟ್‌ನಲ್ಲಿ ಅನುದಾನ ನೀಡಲಾಗಿದೆ. ಆದರೆ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿರುವ ಕುರುಬ ಸಮಾಜಕ್ಕೆ ಸರ್ಕಾರದಿಂದ ಅನ್ಯಾಯವಾಗಿದೆ ಎಂದು ತಿಳಿಸಿದೆ.

ಕುರುಬರನ್ನು ಎಸ್.ಟಿ.ಗೆ ಸೇರ್ಪಡೆ ಮಾಡಲು ಈಗಾಗಲೇ ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗುತ್ತಿದೆ. ಇಷ್ಟಾದರೂ, ಇತರೆ ಸಮಾಜಗಳ ಮೀಸಲಾತಿ ಬೇಡಿಕೆಗಳಿಗೆ ರೂಪಿಸಲಾಗಿರುವ ತ್ರಿಸದಸ್ಯ ಸಮಿತಿಗೆ ಕುರುಬರ ಮೀಸಲಾತಿ ಸೇರ್ಪಡೆ ಮಾಡಿರುವುದನ್ನು ಮಹಾಸಭಾ ವಿರೋಧಿಸಿದೆ.

ಸರ್ಕಾರದ ಕ್ರಮದಿಂದ ಮೀಸಲಾತಿ ಬೇಡಿಕೆ ಈಡೇರಿಸುವುದು ವಿಳಂಬವಾಗುತ್ತದೆ. ಕುರುಬರು ಹೊಸದಾಗಿ ಮೀಸಲಾತಿ ಬೇಡಿಕೆ ಇಟ್ಟಿಲ್ಲ. ಈಗಾಗಲೇ ಕುರುಬ ಸಮುದಾಯದ ಸಮಾನಾರ್ಥ ಪದದ ಜಾತಿಗಳು ಮೀಸಲಾತಿಯಲ್ಲಿವೆ. ಅದನ್ನೇ ರಾಜ್ಯಾದ್ಯಂತ ವಿಸ್ತರಿಸಲು ಕೋರಿದ್ದೇವೆ ಎಂದು ಮಹಾಸಭಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಅವರಿಗೆ ಮಹಾಸಭಾದಿಂದ ರಾಜ್ಯ ಸಂಚಾಲಕ ವೆಂಕಟೇಶ್ ಮಾಯಕೊಂಡ, ದಾವಣಗೆರೆ ಜಿಲ್ಲಾಧ್ಯಕ್ಷ ಸಿ. ವೀರಣ್ಣ, ಕಾರ್ಯಾಧ್ಯಕ್ಷ ಚಂದ್ರು ದೀಟೂರು, ಪ್ರಧಾನ ಕಾರ್ಯದರ್ಶಿ ಘನರಾಜ್, ಕಾರ್ಯದರ್ಶಿ ಸಿದ್ದಲಿಂಗಪ್ಪ ಪತ್ರ ಬರೆದಿದ್ದಾರೆ.

ಕರ್ನಾಟಕ ಸರ್ಕಾರ
**ಉಪ ನಿರ್ದೇಶಕರ ಕಛೇರಿ, ಜಿಲ್ಲಾ ಖಜಾನೆ**
**ಜಿಲ್ಲಾಡಳಿತ ಭವನ, ದಾವಣಗೆರೆ.**
ದೂ.ಸಂ: 08192–257922 E-mail: dd.davangere@karnataka.gov.in
ಸಂಖ್ಯೆ:– ಜಿಖದಾ/ಟೆಂಡರ್/2020–21 ದಿನಾಂಕ: 10.03.2021

**ಟೆಂಡರ್ ಪ್ರಕಟಣೆ**

ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ದಾವಣಗೆರೆ ಕಛೇರಿಯ ಅಧಿಕೃತ ಕೆಲಸಗಳಿಗಾಗಿ ಮಾಡಲ್ 2016 ಹಾಗೂ ನಂತರದ ಸುಸ್ಥಿತಿಯಲ್ಲಿರುವ ಎರ್ಟಿಗಾ, ಇಟಿಯೋಸ್, ಸ್ವಿಫ್ಟ್ ಡಿಸೈರ್, ಬೊಲೇರೋ ಹಾಗೂ ಇನ್ನಿತರ ನವೀನ ಮಾದರಿಯ ವಾಹನಗಳನ್ನು ಮಾಸಿಕ ದರದಲ್ಲಿ ಬಾಡಿಗೆ ಪಡೆಯಲು ರೂ. 30,000=00ಗಳ ಮಿತಿಗೆ ಒಳಪಟ್ಟು, ದರಪಟ್ಟಿಗಳನ್ನು ಸಂಬಂಧಪಟ್ಟ ಆಸಕ್ತ ಬಿಡ್ಡುದಾರರಿಂದ ದಿನಾಂಕ: 10.03.2021 ರಿಂದ 24.03.2021ರವರೆಗೆ ಮಧ್ಯಾಹ್ನ 2 ಗಂಟೆಯೊಳಗಾಗಿ ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಜಿಲ್ಲಾಡಳಿತ ಭವನ, ದಾವಣಗೆರೆ ಕಛೇರಿಗೆ ದರಪಟ್ಟಿಯನ್ನು ಸಲ್ಲಿಸಲು ನಿಮಿತ್ತ ಸೂಚಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತುಗಳಿಗೆ ಜಿಲ್ಲಾ ಖಜಾನೆ, ಜಿಲ್ಲಾ ಆಡಳಿತ ಭವನ, ದಾವಣಗೆರೆ ಕಛೇರಿಯನ್ನು ಸಂಪರ್ಕಿಸಲು ತಿಳಿಸಿದೆ.
ವಾಸಾಇ/ಡಿವಿಜಿ/753/ಎಂಸಿಎ/2020–21 ಸಹಿ/– ಉಪ ನಿರ್ದೇಶಕರು

**ಹೊನ್ನಾಳಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ**
ಹೊನ್ನಾಳಿ - 577 217, ದಾವಣಗೆರೆ ಜಿಲ್ಲೆ, ಕರ್ನಾಟಕ ರಾಜ್ಯ
ಫೋ. : 08188 251027

**ಬಹಿರಂಗ ಹರಾಜು ಪ್ರಕಟಣೆ**

ಮೇಲ್ಕಾಣಿಸಿದ ಸಂಘಕ್ಕೆ ಸೇರಿದ ಮುದ್ರಣ ಯಂತ್ರಗಳು ಹಾಗೂ ಕಟ್ಟಿಂಗ್ ಮಷಿನ್, ವಿದ್ಯುತ್ ಮೋಟಾರ್ ಜೊತೆಗೆ ಇತರೆ ಸಾಮಗ್ರಿಗಳನ್ನು ಬಹಿರಂಗ ಹರಾಜು ಮಾಡಲು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಅಪರ ನಿಬಂಧಕರು ಬೆಂಗಳೂರು ಇವರ ಆದೇಶ ನಂ. ಆರ್.ಸಿ.ಎಸ್./ಎಂಕೆಟಿ/2187/2019-20 ದಿನಾಂಕ : 31.08.2020ರ ಪತ್ರದ ಪ್ರಕಾರ ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಾವಣಗೆರೆ ಉಪ-ವಿಭಾಗ ಹಾಗೂ ಸಂಘದ ಕಾರ್ಯಕಾರಿ ಮಂಡಳಿಯಂತೆ ದಿನಾಂಕ : 17.03.2021ನೇ ಬುಧವಾರ ಮಧ್ಯಾಹ್ನ 12.00 ಗಂಟೆಗೆ ಸಂಘದ ಕಛೇರಿಯಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಬಹುದು. ಷರತ್ತುಗಳ ವಿವರ ಇತ್ಯಾದಿಗಳನ್ನು ಸಂಘದ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ. ಹಾಗೂ ಷರತ್ತುಗಳ ವಿವರಗಳನ್ನು ಸಂಘದ ನೋಟೀಸ್ ಬೋರ್ಡಿನಲ್ಲಿ ಹಾಕಲಾಗಿದೆ.

**ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 99016 89928**

ಸಹಿ/- (ಕೆ.ಈ. ಈಶ್ವರಪ್ಪ)
ಅಧ್ಯಕ್ಷರು, ಟಿಎಪಿಸಿಎಂಎಸ್.ಲಿ., ಹೊನ್ನಾಳಿ.

ಸಹಿ/- (ಜಿ.ಈ. ಮುರಿಗೇಶಪ್ಪ)
ಮುಖ್ಯ ಕಾರ್ಯದರ್ಶಿಗಳು, ಟಿಎಪಿಸಿಎಂಎಸ್.ಲಿ., ಹೊನ್ನಾಳಿ.

ಜಿಲ್ಲಾ ಪಂಚಾಯಿತಿ ದಾವಣಗೆರೆ ಕರ್ನಾಟಕ ಸರ್ಕಾರ ತಾಲ್ಲೂಕು ಪಂಚಾಯಿತಿ ದಾವಣಗೆರೆ
**ಗ್ರಾಮ ಪಂಚಾಯಿತಿ ಕಾರ್ಯಾಲಯ ಹಳೇಬಾತಿ**
ಗ್ರಾ.ಪಂ.ಹ/ 02/2020-21 ದಿನಾಂಕ 12.03.2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999)

ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮ ಪಂಚಾಯಿತಿಯ 2020-21 ನೇ ಸಾಲಿನ ಪರಿಷ್ಕೃತ 14ನೇ ಹಣಕಾಸು ಯೋಜನೆಯಡಿ ಅನುಮೋದಿತವಾದ ಈ ಕೆಳಕಂಡ ವಿವರಣೆಯಂತೆ ನೋಂದಾಯಿತ ಸಂಸ್ಥೆಗಳಿಂದ ನಿಬಂಧನೆಗಳಿಗೊಳಪಟ್ಟು ಮೊಹರು ಮಾಡಿದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳ ಸಹಿದಾರರಿಂದ ಆಹ್ವಾನಿಸಲಾಗಿದೆ. ಸರಬರಾಜುದಾರರು ಗ್ರಾಮ ಪಂಚಾಯಿತಿ ಕಛೇರಿ ಕೆಲಸದ ಸಮಯದಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿರುತ್ತದೆ.

| ಕ್ರ.ಸಂ | ಟೆಂಡರ್ ಗಿಟ್ಟ ಮೊತ್ತದ ವಿವರ | |
|---|---|---|
| 01 | ಹಳೇಬಾತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ನಿರ್ವಹಣೆಗಾಗಿ ಸಾಮಗ್ರಿ ಖರೀದಿಸುವುದು. | 1,50,000 |
| 02 | ಹಳೇಬಾತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಬೀದಿ ದೀಪ ನಿರ್ವಹಣೆಗಾಗಿ ಸಾಮಗ್ರಿ ಖರೀದಿಸುವುದು. | 2,00,000 |
| 03 | ಹಳೇಬಾತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿಕಲ ಚೇತನರಿಗೆ ಸಾಧನ ಸಲಕರಣೆಗಳನ್ನು ಖರೀದಿಸುವುದು. ಸೋಲಾರ್ ದೀಪಗಳು, ಮಂಚಗಳು ಮತ್ತು ಶ್ರವಣ ಸಾಧನಗಳು | 2,32,050 |

1. ಟೆಂಡರ್ ಸ್ವೀಕರಿಸುವ ಪ್ರಾಧಿಕಾರ ಅಧ್ಯಕ್ಷರು/ ಪಿಡಿಓ ಹಳೇಬಾತಿ ಗ್ರಾ.ಪಂ
2. ಟೆಂಡರ್ / ಕೊಟೇಷನ್ ಸಲ್ಲಿಸಲು ದಿನಾಂಕ 12.03.2021 ರಿಂದ 18.03.2021 ರವರೆಗೆ ಟೆಂಡರ್ ಫಾರಂ ಶುಲ್ಕ 200
3. ಟೆಂಡರ್ ತೆರೆಯುವ ದಿನಾಂಕ 18.03.2021ರ ಸಂಜೆ 5.00 ಗಂಟೆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ.

ಅಧ್ಯಕ್ಷರು
ಗ್ರಾಮ ಪಂಚಾಯಿತಿ ಹಳೇಬಾತಿ
ದಾವಣಗೆರೆ ತಾಲ್ಲೂಕು, ಜಿಲ್ಲೆ

ಸಂಪರ್ಕಿಸಬಹುದಾದ ಮೊ. ಸಂಖ್ಯೆ
78924 97661

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ ಹಳೇಬಾತಿ
ದಾವಣಗೆರೆ ತಾಲ್ಲೂಕು, ಜಿಲ್ಲೆ

### ಕೊರೊನಾ ಹಿನ್ನೆಲೆಯಲ್ಲಿ ಸರಳ ಜಾತ್ರೆಗೆ ನಿರ್ಧಾರ : ಇಂದಿನಿಂದ ಒಂದು ವಾರ ಜಾತ್ರೆ, ನಾಳೆ ರಥೋತ್ಸವ

# ಅಜ್ಜಯ್ಯನ 'ಶಿವರಾತ್ರಿ' ಜಾತ್ರೆಗೆ 'ಉಕ್ಕಡಗಾತ್ರಿ' ಸಜ್ಜು

**ಜಿಗಳಿ ಪ್ರಕಾಶ್**

ದಕ್ಷಿಣ ಭಾರತದ ಕಾಶಿ ಕ್ಷೇತ್ರವೆನಿಸಿಕೊಂಡು ಪವಾಡಗಳ ಪುಣ್ಯ ಭೂಮಿಯಾಗಿ, ಸುಕ್ಷೇತ್ರವಾಗಿರುವ ಉಕ್ಕಡಗಾತ್ರಿಯಿಂದಾಗಿ ಹರಿಹರ ತಾಲ್ಲೂಕು ರಾಜ್ಯ, ಹೊರ ರಾಜ್ಯಗಳಲ್ಲಿ ಪ್ರಸಿದ್ಧಿ ಪಡೆದಿದೆ.

ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆಯ ಮಹಿಮೆ ನಾಡಿನ ಜನಮನದಲ್ಲಿ ಗಟ್ಟಿಯಾಗಿ ಉಳಿದಿದೆ.

ಗಾಳಿ, ದೆವ್ವ, ಭೂತ, ಪಿಶಾಚಿ ಹಿಡಿದವರು ತಮ್ಮ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವರು. ತುಂಗಭದ್ರಾ ನದಿಯಲ್ಲಿ ಬಿದ್ದು, ಒದ್ದೆ ಬಟ್ಟೆಯಲ್ಲಿ ಮೆಟ್ಟಿಲೇರಿ ಬರುತ್ತಲೇ ಆವರಿಸಿಕೊಂಡಿದ್ದ ಗ್ರಹವು ಬಡಿದಾಡ ತೊಡಗಿ, ಅಜ್ಜಯ್ಯನ ದರ್ಶನವಾದೊಡನೆ ಅವರಿಂದ ಬಿಟ್ಟು ಓಡುವ ಪದ್ಧತಿ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಉಕ್ಕಡಗಾತ್ರಿಗೆ ದುಃಖಿತರಾಗಿ ಬರುವ ಭಕ್ತರು ಬೇನೆ, ಬೇಸರಿಕೆಗಳಿಂದ ಬಳಲಿ ಅಜ್ಜಯ್ಯನ ದರ್ಶನ ಪಡೆದು, ತಮ್ಮ ಸಂಕಷ್ಟಗಳನ್ನು ದೂರ ಮಾಡಿಕೊಳ್ಳಲು ಪ್ರತಿ ಅಮಾವಾಸ್ಯೆ, ಹುಣ್ಣಿಮೆ ಸೋಮವಾರ ಮತ್ತು ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ತುಂಗಭದ್ರಾ ನದಿ ಉಕ್ಕೇರಿ ಬರುವಂತೆ ಬರುವ ಭಕ್ತರು ಭಕ್ತಿ ಪೂರ್ವಕ ಸೇವೆ ಸಲ್ಲಿಸಿ ದೈಹಿಕ, ಮಾನಸಿಕ, ಆರ್ಥಿಕ ಸಂಕಷ್ಟಗಳಿಂದ ಮುಕ್ತಿ ಪಡೆಯುತ್ತಾರೆ. ಅನೇಕ ಭಕ್ತರು ಸಂತಾನ ಭಾಗ್ಯ ಮತ್ತು ಮಂಗಳ ಕಾರ್ಯದಲ್ಲಿ ಯಶಸ್ಸು ಹೊಂದಿದ್ದಾರೆ.

ಈ ರೀತಿ ರಾಜ್ಯ-ಹೊರ ರಾಜ್ಯಗಳಲ್ಲಿ ಸಾಕಷ್ಟು ಹೆಸರು ಮಾಡಿರುವ ಈ ಸುಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳೂ ನಡೆದಿವೆ. ಶ್ರೀ ಕರಿಬಸವೇಶ್ವರ ಅಜ್ಜಯ್ಯನಿಗೆ 250 ಕೆ.ಜಿ. ತೂಕದ ಬೆಳ್ಳಿ ರಥದಲ್ಲಿ ರಥೋತ್ಸವವೂ ಸಹ ನಡೆಯುತ್ತಾ ಬಂದಿದೆ. ಗರ್ಭಗುಡಿಯ ಸುತ್ತ 30 ಕೆ.ಜಿ. ಬೆಳ್ಳಿ ಕವಚ ನಿರ್ಮಿಸಲಾಗಿದೆ. ಈ ವರ್ಷ 7.50 ಲಕ್ಷ ರೂ. ವೆಚ್ಚದಲ್ಲಿ ಹಳೆಯ ರಥಕ್ಕೆ ಹೊಸ ತಂತ್ರಜ್ಞಾನದ ಸ್ಪರ್ಶ ನೀಡಿ, ಸುರಕ್ಷತೆಯ ದೃಷ್ಟಿಯಿಂದ ರಥಕ್ಕೆ ಪವರ್ ಸ್ಟೇರಿಂಗ್ ಅಳವಡಿಸಲಾಗಿದೆ.

**ಜಾತ್ರೆಗೆ ಸಿದ್ಧತೆ :** ಇಂದಿನಿಂದ ಒಂದು ವಾರಗಳ ಕಾಲ ನಡೆಯುವ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಕ್ಷೇತ್ರದಲ್ಲಿ ಸಿದ್ಧತೆಗಳು ಪೂರ್ಣಗೊಂಡಿದ್ದು, ಜಾತ್ರೆಗೆ ಬರುವ ಭಕ್ತರ ವಾಸ್ತವ್ಯಕ್ಕೆ 350ಕ್ಕೂ ಹೆಚ್ಚು ಕೊಠಡಿಗಳನ್ನು ವ್ಯವಸ್ಥೆ ಮಾಡಲಾಗಿದೆ. ಮಹಿಳೆಯರಿಗೆ ಮತ್ತು ಪುರುಷರಿಗೆ 80 ಪ್ರತ್ಯೇಕ ಶೌಚಾಲಯ ಮತ್ತು ಸಾರ್ವಜನಿಕ ಶೌಚಾಲಯಗಳ ವ್ಯವಸ್ಥೆ ಅಲ್ಲದೇ, ಗದ್ದಿಗೆಯ ಬೃಹತ್ ಕಲ್ಯಾಣ ಮಂಟಪಗಳು ಸೇವೆಗೆ ಲಭ್ಯವಿದ್ದು, ಜನರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಸಕಲ ರೀತಿಯಲ್ಲೂ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಟ್ರಸ್ಟ್ ಕಮಿಟಿಯ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

**ಬಿಗಿ ಭದ್ರತೆ :** ಎಸ್ಪಿ ಹನುಮಂತರಾಯ ಅವರ ಮಾರ್ಗದರ್ಶನದಲ್ಲಿ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಸತೀಶ್ ಅವರ ನೇತೃತ್ವದಲ್ಲಿ ಅಜ್ಜಯ್ಯನ ಜಾತ್ರೆಗೆ ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಭಾರೀ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ ಎಂದು ಪಿಎಸ್ಐ ವೀರಬಸಪ್ಪ ಕುಸುಲಾಪುರ ತಿಳಿಸಿದರು. 7 ಪಿಎಸ್ಐ, 22



ಎಎಸ್ಐ, 56 ಪೊಲೀಸ್ ಹೆಡ್ ಕಾನ್ಸ್‌ಟೇಬಲ್, 138 ಪೊಲೀಸ್ ಕಾನ್ಸ್‌ಟೇಬಲ್, 17 ಮಹಿಳಾ ಪೊಲೀಸ್ ಸಿಬ್ಬಂದಿ ಹಾಗೂ 2 ಡಿಆರ್ ವ್ಯಾನ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಮುಂಜಾಗ್ರತಾ ಕ್ರಮವಾಗಿ ಅಗ್ನಿಶಾಮಕ ದಳದ ಒಂದು ವಾಹನ, ತುರ್ತು ಆರೋಗ್ಯ ಸೇವೆಗಾಗಿ 3 ಆ್ಯಂಬುಲೆನ್ಸ್ ಮತ್ತು ಸ್ಥಳೀಯ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಸ್ಥಳ ದಲ್ಲಿಯೇ ಇರುವಂತೆ ಸೂಚನೆ ನೀಡಲಾಗಿದೆ.

ರಥೋತ್ಸವ ಜರುಗುವ ಮಾರ್ಗದಲ್ಲಿ, ನದಿ ಪಾತ್ರದಲ್ಲಿ, ದೇವಸ್ಥಾನ, ಕಲ್ಯಾಣ ಮಂಟಪ, ಪಾರ್ಕಿಂಗ್ ಸ್ಥಳಗಳಲ್ಲಿ ಒಟ್ಟು 150 ಸಿಸಿ ಟಿವಿ ಕ್ಯಾಮರಾಗಳನ್ನು ದೇವಸ್ಥಾನದಿಂದಲೇ ಅಳವಡಿಸಲಾಗಿದ್ದು, ಕಳ್ಳತನ ತಡೆಗಟ್ಟುವ ಉದ್ದೇಶದಿಂದ ದಾವಣಗೆರೆ, ಶಿವಮೊಗ್ಗ, ಹಾವೇರಿ, ಚಿತ್ರದುರ್ಗ ಜಿಲ್ಲೆಗಳಿಂದ ಕ್ರೈಂ ಸಿಬ್ಬಂದಿಗಳನ್ನು ಕರೆಸಲಾಗಿದೆ.

ಉಕ್ಕಡಗಾತ್ರಿಗೆ ಸೇರುವ 3 ಮಾರ್ಗಗಳಲ್ಲಿ ಒಟ್ಟು 70 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಕೂಡಾ 13 ಜನರೇಟರ್ ಮೂಲಕ ಲೈಟಿಂಗ್ ವ್ಯವಸ್ಥೆ ಮಾಡಿದ್ದೇವೆ. ಜೊತೆಗೆ ತಾತ್ಕಾಲಿಕ ಹೊರ ಪೊಲೀಸ್ ಠಾಣೆ ನಿರ್ಮಿಸಿದ್ದು, 24x7 ಕಾರ್ಯ ನಿರ್ವಹಿಸಲಿದೆ. ಕೋವಿಡ್ ಬಗ್ಗೆ ಜಾಗೃತಿ ಮೂಡಿಸುವ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ ಎಂದು ಪಿಎಸ್ಐ ವೀರಬಸಪ್ಪ ಮಾಹಿತಿ ನೀಡಿದರು.

ಈ ಬಾರಿ ವಿಶೇಷವಾಗಿ ಅಜ್ಜಯ್ಯನ ಗದ್ದುಗೆ ಇರುವ ಗರ್ಭ ಗುಡಿಯ ಗೋಡೆಗಳಿಗೆ ಸುಮಾರು 5 ಲಕ್ಷ ರೂ. ವೆಚ್ಚದಲ್ಲಿ ಹಿತ್ತಾಳೆ ಕವಚವನ್ನು ಅಳವಡಿಸಲಾಗಿದೆ. ಕವಚ ತುಂಬಾ ಆಕರ್ಷಣೀಯವಾಗಿದೆ ಎಂದು ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

ಕೋವಿಡ್ ಕಾರಣದಿಂದಾಗಿ ಈ ವರ್ಷ ಜಾತ್ರೆಯನ್ನು ಸರಳವಾಗಿ ಹಮ್ಮಿಕೊಂಡಿದ್ದು, ಜಾತ್ರೆಗೆ ಬರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಬರಬೇಕು ಮತ್ತು ಜಾತ್ರೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. 60 ವರ್ಷ ಮೇಲ್ಪಟ್ಟವರನ್ನು ಹಾಗೂ 10 ವರ್ಷದೊಳಗಿನ ಮಕ್ಕಳನ್ನು ಜಾತ್ರೆಗೆ ಕರೆ ತರಬಾರದೆಂದು ಸುರೇಶ್ ಮನವಿ ಮಾಡಿದ್ದಾರೆ.

ಜಾತ್ರೆಗೆ ಅಗತ್ಯ ಸಿದ್ಧತೆಗಳ ಜೊತೆಗೆ ಮುಂಜಾಗ್ರತಾ ಕ್ರಮಗಳನ್ನು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಕೈಗೊಳ್ಳಲಾಗಿದೆ. ಗ್ರಾ.ಪಂ.ನಿಂದ ಸ್ವಚ್ಛತಾ ಕಾರ್ಯ ನಡೆದಿದ್ದು, ಆರೋಗ್ಯ ಇಲಾಖೆಯಿಂದಲೂ ಮುನ್ನೆಚ್ಚರಿಕೆಯನ್ನು ಕೈಗೊಳ್ಳಲಾಗಿದೆ.

ಸ್ವಚ್ಛತಾ ದೃಷ್ಟಿಯಿಂದ ಆವರಣದಲ್ಲಿ ಪ್ಲಾಸ್ಟಿಕ್ ನಿಷೇಧಿಸಲಾಗಿದೆ. ಸ್ವಚ್ಛತೆ ಹಿನ್ನೆಲೆಯಲ್ಲಿ ಆವರಣದಲ್ಲಿ ತೆಂಗಿನಕಾಯಿ ಒಡೆಯುವುದು, ಎಲ್ಲೆಂದರಲ್ಲಿ ನಿಂಬೆಹಣ್ಣು ತುಳಿಯುವುದು, ಒದ್ದೆ ಬಟ್ಟೆಯಲ್ಲಿ ಉರುಳು ಸೇವೆ ಮಾಡುವುದು, ನದಿಯಲ್ಲಿ ಬಟ್ಟೆ ಮತ್ತು ಫೋಟೋಗಳನ್ನು ಬಿಸಾಡುವುದನ್ನು ನಿಷೇಧಿಸಲಾಗಿದೆ.

**ಜಾತ್ರಾ ಕಾರ್ಯಕ್ರಮಗಳು :** ಅಜ್ಜಯ್ಯನ ಜಾತ್ರೆಯ ಮೊದಲ ದಿನವಾದ ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಕರಿಬಸವೇಶ್ವರ ಸ್ವಾಮಿ ಗದ್ದುಗೆಯ ಪೂಜೆ, ನಂದಿ ಧ್ವಜಾರೋಹಣ ಮಾಡುವ ಮೂಲಕ ಜಾತ್ರೆಗೆ ಚಾಲನೆ ನೀಡಲಾಗುವುದು. ಇದೇ ದಿನ ರಾತ್ರಿ 8.30ಕ್ಕೆ ಜಾಗರಣೆ, ಭಜನೆ ಮತ್ತು ಕೀರ್ತನೆ ನಡೆಯಲಿವೆ. ದಿನಾಂಕ 14ರ ಭಾನುವಾರ ಬೆಳಿಗ್ಗೆ 8.30ಕ್ಕೆ ಶ್ರೀ ನಂದಿಗುಡಿ ವೃಷಭಪುರಿ ಸಂಸ್ಥಾನ 1108 ಜಗದ್ಗುರು ಶ್ರೀ ಶ್ರೀ ಸಿದ್ಧರಾಮೇಶ್ವರ ದೇಶಿಕೇಂದ್ರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ರಥೋತ್ಸವದ ಮಹಾಪೂಜೆ, ನಂತರ ಸಕಲ ವೈಭವಗಳೊಂದಿಗೆ ಮಹಾ ರಥೋತ್ಸವ ಪ್ರಾರಂಭವಾಗಲಿದೆ.

ದಿನಾಂಕ 15, 16, 17 ರಂದು ಜವಳ, ಹರಕೆ, ಕಾಣಿಕೆ, ಬಯಲು ಜಂಗೀ ಕುಸ್ತಿಗಳು, 18ರ ಗುರುವಾರ ಫಳಾರ ಹಾಕಿಸುವುದು, 19 ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಅಜ್ಜಯ್ಯನ ಬೆಳ್ಳಿ ರಥೋತ್ಸವ ಜರುಗಲಿದ್ದು, ರಾತ್ರಿ ಪಾಲಿಕೋತ್ಸವ ನಡೆಯಲಿದೆ. ಇದೇ ದಿನಾಂಕ 20 ರ ಶನಿವಾರ ಬೆಳಿಗ್ಗೆ ಭಕ್ತರಿಗೆ ಫಳಾರ ಹಂಚುವ ಮೂಲಕ ಜಾತ್ರೆಗೆ ತೆರೆ ಎಳೆಯಲಾಗುವುದು.

## 15, 16ರಂದು ಬ್ಯಾಂಕ್ ಮುಷ್ಕರ

ದಾವಣಗೆರೆ, ಮಾ. 12- ಕೇಂದ್ರ ಸರ್ಕಾರ ಐಡಿಬಿಐ ಬ್ಯಾಂಕ್ ಮತ್ತು 2 ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಲು ಮುಂದಾಗಿರುವುದನ್ನು ವಿರೋಧಿಸಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯು ಇದೇ ದಿನಾಂಕ 15 ಮತ್ತು 16 ರಂದು ಅಖಿಲ ಭಾರತ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿದೆ.

ಮುಷ್ಕರದಲ್ಲಿ ವಿವಿಧ ಬ್ಯಾಂಕ್ ಸಂಘಟನೆಗಳ ಸುಮಾರು 10 ಲಕ್ಷ ಬ್ಯಾಂಕ್ ನೌಕರರು ಹಾಗೂ ಅಧಿಕಾರಿಗಳು ದೇಶದಾದ್ಯಂತ ಈ ಮುಷ್ಕರದಲ್ಲಿ ಭಾಗವಹಿಸ ಲಿದ್ದಾರೆ ಎಂದು ಜಿಲ್ಲಾ ಸಂಚಾಲಕ ಕೆ.ಎನ್.ಗಿರಿರಾಜ್ ಅವರು ತಿಳಿಸಿದ್ದಾರೆ.

## ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷರಾಗಿ ಎಸ್.ಆರ್. ಪಾಟೀಲ್



ಮಲೇಬೆನ್ನೂರು, ಮಾ.12- ನೊಳಂಬ ಲಿಂಗಾಯತ ಸಂಘದ ಕೇಂದ್ರ ಸಮಿತಿಯ ನೂತನ ಅಧ್ಯಕ್ಷರಾಗಿ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಖ್ಯಾತ ವಕೀಲರಾದ ಎಸ್.ಆರ್. ಪಾಟೀಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ಸಂಘದ ಕಚೇರಿಯಲ್ಲಿ ನಡೆದ ನೂತನ ನಿರ್ದೇಶಕರ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ. ಉಪಾಧ್ಯಕ್ಷರಾಗಿ ರಾಮಲಿಂಗಪ್ಪ, ಬಿ.ಕೆ. ಚಂದ್ರಶೇಖರ್, ಎಸ್.ಆರ್. ನಟರಾಜ್, ಕಾರ್ಯದರ್ಶಿ ಬಿ.ಕೆ. ಶಶಿಧರ್, ಜಂಟಿ ಕಾರ್ಯದರ್ಶಿ ಎಸ್.ಜಿ. ಧನಂಜಯ, ಸಿದ್ದರಾಮೇಗೌಡ, ಕುಬೇರಪ್ಪ, ಖಜಾಂಚಿಯಾಗಿ ಕೆ.ಬಿ. ರುದ್ರಪ್ಪ ಆಯ್ಕೆಯಾಗಿದ್ದಾರೆ.

ಕೇಂದ್ರ ಸಮಿತಿಗೆ ದಾವಣಗೆರೆ ಜಿಲ್ಲೆಯಿಂದ ನಿರ್ದೇಶಕರಾಗಿ ಆಯ್ಕೆಯಾಗಿರುವ ಮಾಜಿ ಶಾಸಕ ಡಾ. ಡಿ.ಬಿ. ಗಂಗಪ್ಪ, ನಿವೃತ್ತ ಇಂಜಿನಿಯರ್ ಸಿ.ಬಿ. ಈಶ್ವರಪ್ಪ ಸೇರಿದಂತೆ ಎಲ್ಲಾ 41 ನಿರ್ದೇಶಕರು ಸಭೆಯಲ್ಲಿ ಹಾಜರಿದ್ದರು.

## ಗಾಂಜಾ ವಶ : ಇಬ್ಬರ ಬಂಧನ




ದಾವಣಗೆರೆ, ಮಾ.12- ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಇಂದು ಬಂಧಿಸಿರುವ ಇಲ್ಲಿನ ಸಿಇಎನ್ ಅಪರಾಧ ಪೊಲೀಸರು ಸುಮಾರು 2 ಲಕ್ಷದ 35 ಸಾವಿರ ಮೌಲ್ಯದ 5 ಕೆ.ಜಿ 778 ಗ್ರಾಂ ಗಾಂಜಾ ಮತ್ತು 800 ರೂ. ನಗದು ವಶಪಡಿಸಿಕೊಂಡಿದ್ದಾರೆ.

ಭದ್ರಾವತಿ ತಾಲ್ಲೂಕು ಹೊಸಬುಳ್ಳಾಪುರ ಗ್ರಾಮದ ಸಿ.ಆರ್. ಅರವಿಂದನ್, ಭದ್ರಾವತಿ ನ್ಯೂ ಟೌನ್ ನ ಎ. ಅನಿಲ್ ಕುಮಾರ್ ಬಂಧಿತರು.

ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಮಾರ್ಗದರ್ಶನದಲ್ಲಿ ಡಿಸಿಆರ್ ಬಿ ಘಟಕದ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್ ನೇತೃತ್ವದಲ್ಲಿ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಬಿ.ವಿ. ಗಿರೀಶ್, ಸಿಬ್ಬಂದಿಗಳಾದ ಪಿ. ನಾಗರಾಜ್, ಲೋಹಿತ್, ನಾಗರಾಜ್, ಮಲ್ಲಿಕಾರ್ಜುನ ಹಾದಿಮನಿ, ಕೊಟ್ರೇಶ್, ದ್ಯಾಮೇಶ್ ಒಳಗೊಂಡ ತಂಡವು ಹರಿಹರ ತಾಲ್ಲೂಕಿನ ಹರಿಹರ-ಶಿವಮೊಗ್ಗ ರಸ್ತೆಯ ಪಕ್ಕದ ಪಿಎಸ್ ಕೆ ಫಾರ್ಮ್ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ವೇಳೆ ದಾಳಿ ನಡೆಸಿದೆ. ಈ ಸಂಬಂಧ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಲೇಬೆನ್ನೂರು ಬಸವೇಶ್ವರ ದೇವಸ್ಥಾನ ಹುಂಡಿಯಲ್ಲಿ 1,12,715 ರೂ. ಸಂಗ್ರಹ



ಮಲೇಬೆನ್ನೂರು, ಮಾ.12- ಪಟ್ಟಣದ ಶ್ರೀ ಬಸವೇಶ್ವರ ದೇವಸ್ಥಾನದ ಕಾಣಿಕೆ ಹುಂಡಿಯನ್ನು ಇಂದು ತೆರೆದು ಹಣವನ್ನು ಎಣಿಕೆ ಮಾಡಲಾಯಿತು.

ಸುಮಾರು 3 ವರ್ಷಗಳ ನಂತರ ತೆರೆದ ಕಾಣಿಕೆ ಹುಂಡಿಯಲ್ಲಿ 1,12, 715 ರೂಪಾಯಿ ಸಂಗ್ರಹವಾಗಿತ್ತು. ಹಣವನ್ನು ಮಲೇಬೆನ್ನೂರು ಎಸ್‌ಬಿಐ ಶಾಖೆಯಲ್ಲಿರುವ ದೇವಸ್ಥಾನದ ಖಾತೆಗೆ ಜಮಾ ಮಾಡಲಾಗಿದೆ ಎಂದು ಉಪತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.

ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಶ್ರೀಧರ್, ಸುಬಾನಿ, ಬೋರಯ್ಯ, ಅಣ್ಣಪ್ಪ, ದೇವರಾಜ್, ಆನಂದತೀರ್ಥ, ದೊಡ್ಡ ಬಸವರಾಜ್, ಸೌಮ್ಯ, ಮಂಜುಳಾ, ಗ್ರಾಮ ಸಹಾಯಕರಾದ ಅಂಜಿನಪ್ಪ, ಮಾರುತಿ, ಜೈ ಮಾರುತಿ, ಸಂತೋಷ್, ಶಶಿಕುಮಾರ್, ಜಿಗಳಿ ರಂಗಸ್ವಾಮಿ, ನಾಗರಾಜ್, ಸುಜಾತ, ಚನ್ನಪ್ಪ ರಾಮಪ್ಪ ಮತ್ತು ನಾಡ ಕಚೇರಿಯ ಪ್ರದೀಪ್, ಬಸವರಾಜ್, ಪುಷ್ಪಾ ಹಿರೇಮಠ ಎಣಿಕೆಯಲ್ಲಿ ಪಾಲ್ಗೊಂಡಿದ್ದರು.

## ಹರಪನಹಳ್ಳಿ : ತಡರಾತ್ರಿ ಬಿಲ್ ಬರೆದ ಸಿಬ್ಬಂದಿ ವರ್ಗ



**ತೆಲಿಗಿ ಮಂಜುನಾಥ್ ಆರೋಪ**

ಹರಪನಹಳ್ಳಿ, ಮಾ.12- ದಿನ ನಿತ್ಯ ಕಚೇರಿ ಅವಧಿಯಲ್ಲಿಯೇ ಸಾರ್ವಜನಿಕರ ಕೈಗೆಟುಕದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ತಡರಾತ್ರಿ ಲೈಟು ಹಾಕಿಕೊಂಡು ಕಾರ್ಯನಿರ್ವಹಿಸಿ ಬಿಲ್ ಬರೆದ ಘಟನೆ ಪಟ್ಟಣದ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗದ ಕಚೇರಿಯಲ್ಲಿ ಬುಧವಾರ ಜರುಗಿದೆ ಎಂದು ತೆಲಿಗಿ ಮಂಜುನಾಥ್ ಆರೋಪ ಮಾಡಿದ್ದಾರೆ.

ಕಳೆದ ರಾತ್ರಿ 11.30ಕ್ಕೆ ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ, ಕೊಟ್ಟೂರು ತಾಲ್ಲೂಕುಗಳನ್ನೊಳಗೊಂಡ ಹರಪನಹಳ್ಳಿಯ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗದ ಕಚೇರಿಯಲ್ಲಿ ಮಾರ್ಚ್ ತಿಂಗಳ ಅಂತ್ಯದ ಒಳಗಡೆ ವಾರ್ಷಿಕ ಆಯವ್ಯಯ ಸರಿದೂಗಿಸಿ ಬಿಲ್ ಬರೆದು ಅಂತಿಮಗೊಳಿಸುವ ಹಿನ್ನೆಲೆಯಲ್ಲಿ ಸಿಬ್ಬಂದಿ ಈ ದುಸ್ಸಾಹಸಕ್ಕೆ ಕೈ ಹಾಕಿದ್ದಾರೆ ಎಂದು ಅವರು ದೂರಿದ್ದಾರೆ.

ತಾಲ್ಲೂಕಿನಾದ್ಯಂತ ಕುಡಿಯುವ ನೀರಿನ ಪೈಪುಗಳು ಒಡೆದು ಹೋಗಿ ನೈರ್ಮಲ್ಯ ಎದ್ದು ಕಾಣುತ್ತದೆ. ಈ ಕುರಿತು ನೂರಾರು ಬಾರಿ ಜನಪ್ರತಿನಿಧಿಗಳು, ಸಾರ್ವಜನಿಕರು ದೂರು ಸಲ್ಲಿಸಿದರೂ ಕ್ಯಾರೇ ಎನ್ನದ ಸದರಿ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಏಕಾಏಕಿ ತಡರಾತ್ರಿ ಬಿಲ್ ಬರೆದಿರುವುದು ಏಕೆ? ಎಂಬ ಪ್ರಶ್ನೆಯನ್ನು ಅವರು ಮಾಡಿದ್ದಾರೆ.

ಮಾರ್ಚ್ ತಿಂಗಳಿನಲ್ಲಿ ವಾರ್ಷಿಕ ಆಯವ್ಯಯ ಸರಿದೂಗಿಸಿ ಗುತ್ತಿಗೆದಾರರಿಗೆ ಬಿಲ್ ದಯಪಾಲಿಸಲು ತಡ ರಾತ್ರಿವರೆಗೂ ಕಚೇರಿ ತೆರೆದಿಟ್ಟಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ಹೇಳಿದ್ದಾರೆ.

ಅನುಮಾನಗೊಂಡು ನಾನು ಕಚೇರಿ ಒಳಗಡೆ ಪ್ರವೇಶಿಸಿದರೂ ಸಿಬ್ಬಂದಿ ಯವರು ವಿಚಲಿತರಾಗದೇ ವಿವಿಧ ಗುತ್ತಿಗೆ ಕಾಮಗಾರಿ ಹೆಸರಿನ ದಾಖಲಾತಿ ಪುಸ್ತಕಗಳನ್ನು ಓದುತ್ತಿದ್ದ, ಮತ್ತೊಬ್ಬ ಸಿಬ್ಬಂದಿ ಅವರು ಓದಿದಂತೆ ಬರೆದು ಅಂದಾಜು ಮೊತ್ತವನ್ನು ನಮೂದಿಸುತ್ತಿದ್ದರು ಎಂದು ಆರೋಪಿಸಿದ್ದಾರೆ.

ಈ ಕುರಿತು ಸಿಬ್ಬಂದಿಯನ್ನು ಪ್ರಶ್ನಿಸಿದರೆ ಮಾರ್ಚ್ ತಿಂಗಳು ಮುಗಿಯುವ ಒಳಗೆ ಗುತ್ತಿಗೆ ಕಾರ್ಯನಿರ್ವಹಿಸಿದ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಬೇಕಲ್ಲವೇ ಅದಕ್ಕಾಗಿ ತಡರಾತ್ರಿಯಾದರೂ ಕಾರ್ಯನಿರ್ವಹಿಸು ತ್ತಿದ್ದೇವೆ ಎಂದು ಸಮಜಾಯಿಷಿ ನೀಡಿದರು ಎಂದು ಅವರು ತಿಳಿಸಿದ್ದಾರೆ. ಈ ಸಂಬಂಧ ತನಿಖೆ ನಡೆದರೆ ಸತ್ಯ ಹೊರಬರಲಿದೆ ಎಂದು ಮಂಜುನಾಥ್ ಹೇಳಿದ್ದಾರೆ.

### ಕದಳಿ ಮಹಿಳಾ ವೇದಿಕೆಯಿಂದ

## ವಾಟ್ಸಾಪ್ ಮೂಲಕ ದತ್ತಿ ಉಪನ್ಯಾಸ



ದಾವಣಗೆರೆ, ಮಾ. 12- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆ ದಾವಣಗೆರೆ ಕದಳಿ ಮಹಿಳಾ ವೇದಿಕೆ ತಾಲ್ಲೂಕು ಘಟಕದಿಂದ 122ನೇ ಕದಳಿ ಕಮ್ಮಟವನ್ನು ವಾಟ್ಸಾಪ್ ಮೂಲಕ ನಡೆಸಲಾಯಿತು.

ಲಿಂ. ರಾಜಶೇಖರಯ್ಯ ಮತ್ತು ಲಿಂ. ಆರ್. ದಯಾನಂದ್ ಹಾಗೂ ಲಿಂ. ಸಿದ್ದಮ್ಮ ಮತ್ತು ಲಿಂ. ಚನ್ನಬಸಮ್ಮ ಅವರ ದತ್ತಿ ಉಪನ್ಯಾಸ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವೇದಿಕೆಯ ಸದಸ್ಯರಿಗಾಗಿ ನಮ್ಮ ಮಹಿಳಾ ಸಾಧಕಿಯರ ಬಗ್ಗೆ ನಾವೆಷ್ಟು ಬಲ್ಲೆವು ಶೀರ್ಷಿಕೆಯಡಿ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಅಧ್ಯಕ್ಷತೆಯನ್ನು ತಾಲ್ಲೂಕು ಘಟಕದ ಅಧ್ಯಕ್ಷರಾದ ಕುಸುಮಾ ಲೋಕೇಶ್ ವಹಿಸಿದ್ದರು.

ದತ್ತಿ ಉಪನ್ಯಾಸಕರಾಗಿ ಶಿಕ್ಷಣಾಧಿಕಾರಿ ಪುಷ್ಪಲತಾ ಅವರು ಒತ್ತಡ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ವಿಷಯ ಕುರಿತು ಮಾತನಾಡಿದರು. ಲಿಖಿತ ರಸಪ್ರಶ್ನೆ ವಿಭಾಗದಲ್ಲಿ ಮಮತ ರಾಧಾಕೃಷ್ಣ ಪ್ರಥಮ, ಇಂದಿರಾ ರಂಗನಾಥರೆಡ್ಡಿ ದ್ವಿತೀಯ, ಪೂರ್ಣಿಮಾ ಪಾಟೀಲ್ ತೃತೀಯ ಹಾಗೂ ಹೇಮ ಜಿ. ಶೇಠ್ ಸಮಾಧಾನಕರ ಹಾಗೂ ಸಮಿತಿ ಸದಸ್ಯರ ವಿಭಾಗದಲ್ಲಿ ವಿಜಯ ಚಂದ್ರಶೇಖರ್ ಬಹುಮಾನ ಪಡೆದರು.

ಕದಳಿ ವೇದಿಕೆಯ ಗೌರವಾಧ್ಯಕ್ಷರಾದ ಶಂಶಾದ್ ಬೇಗಂ ಹಾಗೂ ದತ್ತಿ ಪಂಕಜಾ ದಯಾನಂದ್ ಉಪಸ್ಥಿತರಿದ್ದರು.

ಚಂದ್ರಿಕಾ ಮಂಜುನಾಥ್ ನಿರೂಪಿಸಿದರು. ಮುಕ್ತಾಯಕ್ಕ ತಂಡದವರು ಪ್ರಾರ್ಥಿಸಿದರು. ವಿಜಯಲಕ್ಷ್ಮಿ ಸ್ವಾಗತಿಸಿದರು. ವಾಣಿರಾಜ್ ದತ್ತಿ ಹಾಗೂ ದತ್ತಿ ದಾನಿಗಳನ್ನು ಪರಿಚಯಿಸಿದರು. ನಿರ್ಮಲ ಶಿವಕುಮಾರ್ ವಂದಿಸಿದರು.

## ಮಹಿಳೆಯರು ಎಲ್ಲಾ ರಂಗಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ : ಚನ್ನಬಸವ ಶಿವಯೋಗಿ ಶ್ರೀ



ಹರಪನಹಳ್ಳಿ, ಮಾ.12- ತಾಯಿ,ತಂಗಿ,ಅಕ್ಕ,ಮಡದಿ,ಗೆಳತಿ,ಅಜ್ಜಿ,ಚಿಕ್ಕಮ್ಮ ಹೀಗೆ ನಾನಾ ವೇಷಗಳಲ್ಲಿ ಸಂಬಂಧಗಳ ಸರಮಾಲೆಯನ್ನು ತೊಟ್ಟು ನಿಂತ ಮಹಿಳೆಯರು ಇಂದು ಎಲ್ಲಾ ರಂಗಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ ಎಂದು ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕೆ. ಕಲ್ಲಹಳ್ಳಿ ಗ್ರಾಮದಲ್ಲಿ ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹಿಳೆಯರಿಗೆ ಸನ್ಮಾನ, ಕೋಲಾಟ, ರಸಪ್ರಶ್ನೆ ಮತ್ತು ಭಜನಾ ಸ್ಪರ್ಧೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ ಮಾತನಾಡಿದರು.

ಕೆಪಿಸಿಸಿ ವೈದ್ಯಕೀಯ ಘಟಕದ ಉಪಾಧ್ಯಕ್ಷ ಡಾ. ಮಹಂತೇಶ ಚರಂತಿಮಠ್, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ವಿಜೇತ ರಂಗ ಕಲಾವಿದೆ ಮರಿಯಮ್ಮನಹಳ್ಳಿ ನಾಗರತ್ನಮ್ಮ, ಧಾರಾವಾಹಿ ನಟಿ ಮಾನಸ, ಸಖಿ ಟ್ರಸ್ಟ್‌ನ ಭಾಗ್ಯಮ್ಮ, ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್, ಶಿಕ್ಷಕಿ ಸುಭದ್ರಮ್ಮ, ಕವಿತ ಶಿವಮೊಗ್ಗ, ಮಮ್ತಾಜ್, ಟುವ್ವಿ ಟುವ್ವಿ ಪುಷ್ಪ, ಕಾಳಮ್ಮ, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ದಾದಾಪೀರ್. ಮನೋಜ್ ಇನ್ನಿತರರಿದ್ದರು.

## ಸಾದರ ಲಿಂಗಾಯತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು

ದಾವಣಗೆರೆ, ಮಾ.12- ಸರ್ಕಾರಿ ಕೋಟಾದಲ್ಲಿ ಸ್ಥಾನ ಗಳಿಸಿ, 2021-22 ನೇ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿರುವ ರಾಜ್ಯ ಮಟ್ಟದ ಸಾಧು ಲಿಂಗಾಯತ ಸಮಾಜದ ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ 5 ವರ್ಷದ ಅಧ್ಯಯನ ಅವಧಿಗೆ ಆರ್ಥಿಕ ನೆರವು ನೀಡಲು ಸಾದರ ನೌಕರರ ಬಳಗ ಮುಂದಾಗಿದೆ.

ಆಸಕ್ತರು ಇದೇ ದಿನಾಂಕ 26 ರೊಳಗೆ ಅಗತ್ಯವಿರುವ ದಾಖಲೆಗಳೊಂದಿಗೆ ತಮ್ಮ ಊರಿನ ಇಬ್ಬರು ಪ್ರಮುಖ ವ್ಯಕ್ತಿಗಳ ಮೊಬೈಲ್ ನಂಬರ್ ಮತ್ತು ವಿಳಾಸವನ್ನು ನಮೂದು ಮಾಡಿ, ಕೆ. ನಾಗಪ್ಪ, ಅಧ್ಯಕ್ಷರು ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, ಡೋರ್. ನಂ. 1645/145, ವಿದ್ಯಾನಗರ ಮುಖ್ಯ ರಸ್ತೆ, ಪೋಸ್ಟ್ ಆಫೀಸ್ ಎದುರು, ದಾವಣಗೆರೆ- 5 ಅರ್ಜಿ ಸಲ್ಲಿಸುವುದು.

ವಿವರಕ್ಕೆ ಮೊ: 98443 69744, 9448439662 ಸಂಪರ್ಕಿಸುವುದು.

## ಕೊರೊನಾ : ಪಂಜಾಬ್ ಶಾಲೆಗಳು ಬಂದ್

ಚಂಡೀಘಡ, ಮಾ. 12 – ಕೊರೊನಾ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಪಂಜಾಬ್‌ನ ನಾಲ್ಕು ಜಿಲ್ಲೆಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸಿರುವ ಪಂಜಾಬ್ ಸರ್ಕಾರ, ಎಲ್ಲಾ ಶಾಲೆಗಳನ್ನು ಮುಚ್ಚಲು ನಿರ್ಧರಿಸಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಸರ್ಕಾರಿ ಹಾಗೂ ಖಾಸಗಿ ಸೇರಿ ದಂತೆ ಎಲ್ಲ ಶಾಲೆಗಳನ್ನು ಮುಚ್ಚುವುದಾಗಿ ಶಿಕ್ಷಣ ಸಚಿವ ವಿಜಯ್ ಇಂದರ್ ಸಿಂಗ್ಲಾ ತಿಳಿಸಿದ್ದಾರೆ.

## ಜಗತ್ತೆಲ್ಲವು ಶಿವಮಯ: ರಂಭಾಪುರಿ ಶ್ರೀ



ಬಾಳೆಹೊನ್ನೂರು, ಮಾ.12- ಜಗದಗಲ ಮುಗಿಲಗಲ ತುಂಬಿದ ಶಿವನ ಮಹಿಮೆ ಅಪಾರ. ಸತ್ಯ ಸ್ವರೂಪರಾದ ಶಾಂತರೂಪಿ ಶಿವನು ತಾಪತ್ರಯ ಪರಿಹಾರಕ. ಭಜಿಸುವ ಭಕ್ತರ ಪಾಲಿಗೆ ಕಾಮಧೇನು ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ಅವರು ಶ್ರೀ ರಂಭಾಪುರಿ ಪೀಠದಲ್ಲಿ ಮಹಾಶಿವರಾತ್ರಿ ಅಂಗವಾಗಿ ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆ ಹಾಗೂ ಶ್ರೀ ಸೋಮೇಶ್ವರ ಮಹಾಲಿಂಗಕ್ಕೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ನೆರವೇರಿಸಿ ಮಾತನಾಡಿದರು.

ಶಿವರಾತ್ರಿಯಂದು ಶಿವನೊಲುಮೆಗಾಗಿ ರುದ್ರಾಭಿಷೇಕ, ಬಿಲ್ವಾರ್ಚನೆ ನೆರವೇರಿಸಿ ಶಿವಧ್ಯಾನ ಮಾಡುವ ಹಬ್ಬ ಶಿವರಾತ್ರಿ. ಶಿವನನ್ನು ಪೂಜಿಸಿದರೆ ಸಕಲ ದೇವಾನುದೇವತೆಗಳನ್ನು ಪೂಜಿಸಿದ ಪುಣ್ಯ ಫಲ ಪ್ರಾಪ್ತವಾಗುತ್ತದೆ. ಶಿವ ತಪಸ್ಸು, ಶಿವ ಕರ್ಮ, ಶಿವ ಜಪ, ಶಿವ ಧ್ಯಾನ ಮತ್ತು ಶಿವ ಜ್ಞಾನಗಳ ಮೂಲಕ ಶಿವನನ್ನು ಆರಾಧಿಸಬೇಕು ಎಂದು ವೀರಶೈವ ಧರ್ಮ ಸಿದ್ಧಾಂತದಲ್ಲಿ ರೇಣುಕಾಚಾರ್ಯರು ಬೋಧಿಸಿದ್ದಾರೆ ಎಂದು ಹೇಳಿದರು.

ಶ್ರೀ ಸೋಮೇಶ್ವರ ಮಹಾಲಿಂಗ, ಶ್ರೀ ಜಗದ್ಗುರು ರೇಣುಕಾಚಾರ್ಯರ ಮಂಗಲ ಮೂರ್ತಿ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿಗೆ ಅಭಿಷೇಕ, ಬಿಲ್ವಾರ್ಚನೆ, ಮಹಾಪೂಜೆ ನೆರವೇರಿಸಲಾಯಿತು. ನಾಡಿನ ಎಲ್ಲೆಡೆಯಿಂದ ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು.

## ನಂದಗೋಕುಲ ಶಾಲೆಯಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 12- ನಗರದ ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಸಂಸ್ಥೆ ನಿರ್ದೇಶಕರಾದ ಲಕ್ಷ್ಮಿ ಸತೀಶ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕರಾದ ಶಿವಲೀಲಾ, ಅನುಸೂಯ, ಮುಖ್ಯೋಪಾಧ್ಯಾಯರಾದ ರೆಹನಾ ಬಾನು ನಾಸಿಕ ಹಾಗೂ ಮಲ್ಲಿಕಾರ್ಜುನ, ಹಿರಿಯ ಶಿಕ್ಷಕ ಬಸವರಾಜು ಉಪಸ್ಥಿತರಿದ್ದರು. ಕಸ್ತೂರಿ ನಿರೂಪಿಸಿದರು. ರೇಣುಕಾ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಕು. ಮಾನಸ ವಂದಿಸಿದರು.

## ಶಾಲಾ ಕೊಠಡಿ ಮರು ನಿರ್ಮಾಣಕ್ಕೆ ಮನವಿ



ದಾವಣಗೆರೆ, ಮಾ.12- ವಿನೋಬ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಪಾಠಶಾಲೆಯ ಮೇಲ್ಛಾವಣಿ ಶಿಥಿಲಗೊಂಡಿದ್ದು, ಅದು ಬಿದ್ದು ಅನಾಹುತ ಆಗುವ ಮೊದಲೇ ಶಾಲಾ ಕೊಠಡಿಗಳನ್ನು ಹಾಗೂ ಕಾಂಪೌಂಡ್ ಗೋಡೆಗಳನ್ನು ಪುನರ್‌ನಿರ್ಮಾಣ ಮಾಡಿಕೊಡಬೇಕೆಂದು ಶಾಸಕ ಎಸ್.ಎ. ರವೀಂದ್ರನಾಥ್ ಅವರಿಗೆ ಶಾಲಾಭಿವೃದ್ಧಿ ಸಮಿತಿ ಮನವಿ ಮಾಡಿದೆ. ಈ ಹಿಂದೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮನವಿ ಪತ್ರ ನೀಡಿದರೂ ಸಹ ಸಮಸ್ಯೆಗೆ ಸ್ಪಂದಿಸಿರುವುದಿಲ್ಲ. ಕೂಡಲೇ ಶಾಸಕರು ತಮ್ಮ ವಿಶೇಷ ಅನುದಾನದಲ್ಲಿ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಪುನರ್ ನಿರ್ಮಾಣ ಮಾಡಿಕೊಡಬೇಕೆಂದು ಕೋರಿದ್ದಾರೆ.

## ಜಿಎಂಐಟಿ : ದಿಶಾ - 2021 ಉದ್ಘಾಟನೆ



ದಾವಣಗೆರೆ, ಮಾ. 12 - ನಗರದ ಜಿ.ಎಂ.ಐ.ಟಿ.ತಾಂತ್ರಿಕ ಮಹಾವಿದ್ಯಾಲಯದ ಎಂ.ಬಿ.ಎ. ವಿಭಾಗದಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ವಿಭಾಗದ ಸಾಂಸ್ಕೃತಿಕ, ಕೌಶಲ್ಯ ಅಭಿವೃದ್ಧಿ ವೇದಿಕೆ ದಿಶಾ-2021 ಅನ್ನು ಉದ್ಘಾಟನೆ ಮಾಡಲಾಯಿತು.

ವಿಭಾಗದ ಹಳೆಯ ವಿದ್ಯಾರ್ಥಿ ಹಾಗೂ ಫ್ರಾನ್ಸ್ ಮೂಲದ ಸೊಸೈಟಿ ಜೆನೆರಲಿ ಕಂಪನಿಯ ಗುಣಮಟ್ಟ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭರತ್ ಮಳಿಮಠ, ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ. ಪಿ.ಎಸ್. ಬಸವರಾಜು, ದಿಶಾ ಸಂಚಾಲಕ ಡಾ. ಗುರುರಾಜ್ ಪಾಠಕ್, ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಉಪಸ್ಥಿತರಿದ್ದು ಮಾತನಾಡಿದರು.

ವಿದ್ಯಾರ್ಥಿಗಳಾದ ಎಸ್.ಜಿ. ಬಸವರಾಜ್ ಸ್ವಾಗತಿಸಿದರು. ಜಿ.ಎಸ್. ಸೌಂದರ್ಯ ಪ್ರಾರ್ಥಿಸಿದರು. ಅರ್ಫುರಾ ಹಾಗೂ ನಟರಾಜ್ ನಿರೂಪಿಸಿದರು. ಬಿ.ಕೆ. ಸುಷ್ಮಾ ವಂದಿಸಿದರು.

# ಜೋಡುಕರೆ ಕಂಬಳಕ್ಕೆ ಎಸ್ಸೆಸ್ಸೆಂ ಚಾಲನೆ



ಪುತ್ತೂರು, ಮಾ. 12 - ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದ ಎದುರಿನ ದೇವರಮಾರು ಗದ್ದೆಯಲ್ಲಿ ಏರ್ಪಡಿಸಿದ್ದ 28ನೇ ವರ್ಷದ ಹೊನಲು ಬೆಳಕಿನ ಕೋಟಿ- ಚೆನ್ನಯ ಜೋಡುಕರೆ ಕಂಬಳ ಸ್ಪರ್ಧೆಗೆ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಚಾಲನೆ ನೀಡಿದರು. ನಂತರ ಮಾತನಾಡಿದ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಜಾನಪದ ಸ್ಪರ್ಧೆಯಲ್ಲೊಂದಾದ ಕಂಬಳ ಸ್ಪರ್ಧೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿ, ಇಂತಹ ಸ್ಪರ್ಧೆಗಳನ್ನು ಆಯೋಜಿಸುತ್ತಿರುವ ವಿನಯ್ ಕುಮಾರ್ ಸೊರಕೆ ಮತ್ತು ಶಕುಂತಲಾ ಶೆಟ್ಟಿ ಅವರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರುಗಳಾದ ವಿನಯ್ ಕುಮಾರ್ ಸೊರಕೆ, ರಮಾನಾಥ್ ರೈ, ಅಭಯ್ ಚಂದ್ರ ಜೈನ್, ಮಾಜಿ ಶಾಸಕರಾದ ಶಕುಂತಲಾ ಶೆಟ್ಟಿ, ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ಮುಖ್ಯಮಂತ್ರಿ ಚಂದ್ರು ಮತ್ತಿತರರಿದ್ದರು.

# ಮಮತಾ ಭದ್ರತಾ ಲೋಪ : ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ಸಾಧ್ಯತೆ

ನಂದಿಗ್ರಾಮ (ಪಶ್ಚಿಮ ಬಂಗಾಳ), ಮಾ. 12 – ಪಶ್ಚಿಮ ಬಂಗಾಳದ ಮುಖ್ಯಮತ್ರಿ ಮಮತಾ ಬ್ಯಾನರ್ಜಿ ಅವರು ಪ್ರಚಾರಕ್ಕೆ ತೆರಳಿದಾಗ ಗಾಯಗೊಂಡ ಹಿನ್ನೆಲೆಯಲ್ಲಿ, ಅವರ ರಕ್ಷಣೆ ಹೊಣೆ ಹೊತ್ತಿದ್ದ ಪೊಲೀಸ್ ಸಿಬ್ಬಂದಿಯ ವಿರುದ್ಧ ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಪುರ್ಬಾ ಮಿಡ್ನಾಪುರ ಜಿಲ್ಲೆಯ ನಂದಿಗ್ರಾಮಕ್ಕೆ ಮಮತಾ ಬ್ಯಾನರ್ಜಿ ಪ್ರಚಾರಕ್ಕೆ ತೆರಳಿದ ಸಂದರ್ಭದಲ್ಲಿ ಗಾಯಗೊಂಡಿದ್ದರು. ಈ ಬಗ್ಗೆ ವರದಿ ನೀಡುವಂತೆ ಒಬ್ಬರು ಚುನಾವಣಾ ವೀಕ್ಷಕರನ್ನು ಆಯೋಗ ನೇಮಿಸಿದೆ. ಅವರ ವರದಿಯ ನಂತರ ಶಿಕ್ಷೆಯ ಬಗ್ಗೆ ನಿರ್ಧರಿಸಲಾಗುವುದು ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಮಂತ್ರಿಯ ಭದ್ರತೆಗೆ ನಿಯೋಜಿಸಲಾಗಿದ್ದ ಪೊಲೀಸ್ ಸಿಬ್ಬಂದಿಯಿಂದ ಲೋಪವಾಗಿರುವುದು ಸ್ಪಷ್ಟವಾಗಿದೆ. ಮುಖ್ಯಮಂತ್ರಿ ಸುತ್ತ ಇರುವ ಭದ್ರತಾ ಪರಿಧಿಯನ್ನು ಯಾರೂ ದಾಟಬಾರದು. ನಾವು ರಾಜ್ಯ ಸರ್ಕಾರ ಹಾಗೂ ವೀಕ್ಷಕರ ವರದಿಗಾಗಿ ಕಾಯುತ್ತಿದ್ದೇವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ನಂದಿಗ್ರಾಮದ ಬಿರುಲಿಯಾ ಬಜಾರ್‌ನಲ್ಲಿ ಮಮತಾ ಬ್ಯಾನರ್ಜಿ ಬುಧವಾರ ಪ್ರಚಾರ ನಡೆಸುವಾಗ ಹಲವರು ಮುಖ್ಯಮಂತ್ರಿ ವಾಹನದ ಅತ್ಯಂತ ಸಮೀಪ ಬಂದಿದ್ದರು. ಈ ರೀತಿ ನಡೆಯಬಾರದಿತ್ತು. ಅಂದಿನ ವಿಡಿಯೋಗಳನ್ನು ನೋಡಿದಾಗ ಗಂಭೀರ ರಕ್ಷಣಾ ಲೋಪವಾಗಿರುವುದು ಸ್ಪಷ್ಟವಾಗುತ್ತದೆ ಎಂದು ಅಧಿಕಾರಿ ಹೇಳಿದ್ದಾರೆ.

ಆದರೆ, ಇದುವರೆಗೂ ಕಂಡು ಬಂದಿರುವ ವಿಡಿಯೋಗಳಲ್ಲಿ ಮಮತಾ ಮೇಲೆ ದಾಳಿ ನಡೆಸಲಾಗಿತ್ತೇ ಎಂಬುದು ಸ್ಪಷ್ಟವಾಗಿಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ. ಮಮತಾ ಮೇಲೆ ದಾಳಿ ನಡೆದಿದೆ ಎಂದು ತೃಣಮೂಲ ಕಾಂಗ್ರೆಸ್ ಆರೋಪಿಸಿದೆ. ಮಮತಾ ಬ್ಯಾನರ್ಜಿ ಝಡ್ ಹಂತದ ಭದ್ರತೆ ಹೊಂದಿದ್ದಾರೆ. ಅವರಿಗೆ 20ಕ್ಕೂ ಹೆಚ್ಚು ಸಿಬ್ಬಂದಿ ಭದ್ರತೆ ನೀಡುತ್ತಾರೆ.

# ಧಾರ್ಮಿಕ ಕೇಂದ್ರ ಸ್ವರೂಪ ನಿರ್ಬಂಧ ಪ್ರಶ್ನಿಸಿ ಸುಪ್ರಿಂನಲ್ಲಿ ಅರ್ಜಿ

## ಪ್ರಾರ್ಥನಾ ಸ್ಥಳಗಳು 1947ರಲ್ಲಿದ್ದಂತೆ ಇರಬೇಕು ಎಂಬ ಕಾಯ್ದೆಗೆ ಆಕ್ಷೇಪ

ನವದೆಹಲಿ, ಮಾ. 12 – ದೇಶದಲ್ಲಿರುವ ಧಾರ್ಮಿಕ ಕೇಂದ್ರಗಳ ಸ್ವರೂಪವನ್ನು ಆಗಸ್ಟ್ 15, 1947ರಲ್ಲಿ ಇರುವುದಕ್ಕಿಂತ ಬದಲಾವಣೆ ತರದಂತೆ 1991ರಲ್ಲಿ ಶಾಸನ ರೂಪಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ದಾಖಲಾಗಿದ್ದು, ಈ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸಲಾಗಿದೆ.

1991ರ ಕಾಯ್ದೆ ಅತಾರ್ಕಿಕವಾಗಿದೆ. ಪೂರ್ವಾನ್ವಯವಾಗುವ ರೀತಿಯಲ್ಲಿ ಆಗಸ್ಟ್ 15, 1947ರ ಕಾಲಮಿತಿ ನಿಗದಿ ಪಡಿಸಲಾಗಿದೆ. ಇದು ಮೂಲಭೂತವಾದಿ ಬರ್ಬರ ದಾಳಿಕೋರರು ಹಾಗೂ ಕಾನೂನು ಮುರಿಯುವವರು ಮಾಡಿಕೊಂಡ ಒತ್ತುವರಿಯನ್ನು ಯಥಾಸ್ಥಿತಿಯಲ್ಲಿ ಉಳಿಸಿದಂತೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಹಾಗೂ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಅವರನ್ನು ಒಳಗೊಂಡ ಪೀಠ ಅರ್ಜಿಯ ವಿಚಾರಣೆ ನಡೆಸುತ್ತಿದೆ. ಬಿಜೆಪಿ ನಾಯಕ ಹಾಗೂ ವಕೀಲ ಅಶ್ವಿನಿ ಉಪಾಧ್ಯಾಯ್ ಅವರು 1991ರ ಪ್ರಾರ್ಥನಾ ಸ್ಥಳ (ವಿಶೇಷ ಅವಕಾಶ) ಕಾಯ್ದೆಯ ಸೆಕ್ಷನ್ 2, 3, 4 ಪ್ರಶ್ನಿಸಿ ಅರ್ಜಿ ದಾಖಲಿಸಿದ್ದಾರೆ. ಈ ಕಾಯ್ದೆಯಿಂದಾಗಿ ಪ್ರಾರ್ಥನಾ ಸ್ಥಳವನ್ನು ವಾಪಸ್ ಪಡೆಯಲು ಇರುವ ನ್ಯಾಯಿಕ ಪರಿಹಾರವನ್ನು ಕಸಿದುಕೊಂಡಂತಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಈ ಕಾಯ್ದೆಯಲ್ಲಿ ಅಯೋಧ್ಯೆ ರಾಮ ಜನ್ಮಭೂಮಿ - ಬಾಬ್ರಿ ಮಸೀದಿ ವಿವಾದ ಒಂದಕ್ಕೆ ಮಾತ್ರ ವಿನಾಯಿತಿ ನೀಡಲಾಗಿತ್ತು. ಉಪಾಧ್ಯಾಯ್ ಪರವಾಗಿ ಹಿರಿಯ ವಕೀಲ ಗೋಪಾಲ ಸುಬ್ರಮಣ್ಯಂ ಅವರು ವಾದ ಮಂಡಿಸಿದ್ದಾರೆ.

ಮಥುರ ಹಾಗೂ ಕಾಶಿಯ ಜಾಗವನ್ನು ಹಿಂದೂಗಳಿಗೆ ಮರಳಿಸಬೇಕು ಎಂದು ಕೆಲ ಸಂಘಟನೆಗಳು ಆಗ್ರಹಿಸುತ್ತಿವೆ. 1991ರ ಕಾಯ್ದೆ ಈ ಆಗ್ರಹಕ್ಕೆ ಅಡ್ಡಿಯಾಗಿದೆ. ಈ ಹಿನ್ನೆಲೆಯಲ್ಲಿ ಅರ್ಜಿ ಪ್ರಾಮುಖ್ಯತೆ ಪಡೆದುಕೊಂಡಿದೆ.

ಈ ಕಾಯ್ದೆಯು ಸಮಾನತೆ ಹಾಗೂ ಜೀವದ ಹಕ್ಕಿಗೆ ವಿರುದ್ಧವಾಗಿರುವುದಲ್ಲದೇ, ಸಂವಿಧಾನದ ಮುನ್ನುಡಿಯಲ್ಲಿರುವ ಸೆಕ್ಯೂಲರ್ ತತ್ವಕ್ಕೂ ವಿರುದ್ಧವಾಗಿದೆ ಹಾಗೂ ಸಂವಿಧಾನದ ಮೂಲ ಸ್ವರೂಪಕ್ಕೆ ವಿರುದ್ಧವಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

# ಗೋಡೆಗಳಿಗೆ ಬಣ್ಣ ತುಂಬಿದ ಮಹಿಳಾ ಕಲಾವಿದರು



ದಾವಣಗೆರೆ, ಮಾ. 12- 'ಚಿರಂತನ' ಸಂಸ್ಥೆಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಗೋಡೆಗಳ ಮೇಲೆ ಪೇಟಿಂಗ್ ಮಾಡಿಸುವ ಮೂಲಕ ನಗರದ ಕಾಂಪೌಂಡ್ ಗೋಡೆಗಳ ಸೌಂದರ್ಯ ಹೆಚ್ಚಿಸುವ ಕಾರ್ಯಕ್ಕೆ ಮುಂದಾಗಿದೆ. ನಗರದ ಡಿ.ಆರ್.ಆರ್. ಪಾಲಿಟೆಕ್ನಿಕ್ ಕಾಲೇಜು ಗೋಡೆಗಳ ಮೇಲೆ ಸುಮಾರು ಹತ್ತು ಮಹಿಳಾ ಕಲಾವಿದರು ತಮ್ಮ ಕಲ್ಪನೆಯ ಚಿತ್ತಾರ ಬಿಡಿಸಿದ್ದಾರೆ.

ಮಹಿಳೆಯರಿಗೆ ಅಗತ್ಯವಾದ ಆತ್ಮವಿಶ್ವಾಸದ ನುಡಿಗಳನ್ನೊಳಗೊಂಡ ಚಿತ್ರಗಳು ನೋಡುಗರ ಮನ ಸೆಳೆಯುತ್ತಿವೆ.

ಚಿರಂತನದ ಈ ವಿಶೇಷ ಪ್ರಯತ್ನಕ್ಕೆ ಬಿಲ್ಡಿಂಗ್ ನೀಡ್ಸ್ ಮಾಲೀಕ ಶಂಭು ಉರೇಕೊಂಡಿ ಅವರು ಕಲಾವಿದರಿಗೆ ಬೇಕಾದ ಬಣ್ಣ, ಬ್ರಷ್ ಮುಂತಾದ ಸಾಮಗ್ರಿಗಳನ್ನು ನೀಡಿ ಸಹಕರಿಸಿದ್ದಾರೆ ಎಂದು ಚಿರಂತನ ಸಂಸ್ಥಾಪಕರಾದ ಶ್ರೀಮತಿ ಎನ್. ದೀಪಾ ಹೇಳಿದ್ದಾರೆ.

ಕಲಾವಿದೆಯರಾದ ಕೀರ್ತನ ಆಲ್ ಫೋನ್ಸ್, ಅಂಕಿ ಡಿ.ಎಸ್., ಇಂದೂ ಸಿ.ಹೆಚ್., ನಂದಿತಾ ಆರ್. ಕಟ್ಟೆ, ಪ್ರತಿಭಾ ನರಸಿಂಹನಾಯಕ್, ಅನುಷಾ ನರಸಿಂಹನಾಯಕ್, ಅರ್ಪಿತ ಆರ್., ಸ್ನೇಹ ಆರ್., ಮಧುಶ್ರೀ ಹಿ.ಅದಿತಿ, ಕೆ.ಪ್ರಕಾಶ್, ಬಸಮ್ಮ ಗೋಡೆಗಳಿಗೆ ಬಣ್ಣ ತುಂಬಿದವರು.

ಸ್ಥಳೀಯ ಮಹಿಳಾ ಕಲಾವಿದರಿಗೆ ಸೂಕ್ತ ವೇದಿಕೆ ಕಲ್ಪಿಸುವುದು ಚಿರಂತನದ ಉದ್ದೇಶವಾಗಿತ್ತು, ಮಹಾನಗರ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಆಡಳಿತ ಮಂಡಳಿ ಇಂತಹ ಸ್ಥಳೀಯರನ್ನು ಬಳಸಿಕೊಂಡು ನಗರದಲ್ಲೆಡೆ ಚಿತ್ರ ಬಿಡಿಸುವ ಪ್ರಯತ್ನ ಮಾಡುವಂತೆ ಚಿರಂತನ ತಂಡ ವಿನಂತಿಸಿದೆ.

# ಇಂದು ಕುರುವತ್ತಿ ರಥೋತ್ಸವ

ಹೂವಿನಹಡಗಲಿ ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಕುರುವತ್ತಿ ಬಸವೇಶ್ವರ ಹಾಗೂ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ ಇಂದು ಸಂಜೆ 5 ಗಂಟೆಗೆ ಜರುಗಲಿದೆ. ಜಾತ್ರೆಗೆ ಹೊರಗಿನಿಂದ ಆಗಮಿಸುವ ಭಕ್ತರಿಗೆ ಸರ್ಕಾರ ನಿಷೇಧ ಹೇರಿದೆ. ಆದರೆ ಯಾವುದೇ ಧಾರ್ಮಿಕ ವಿಧಿ-ವಿಧಾನಗಳಿಗೆ ನಿರ್ಬಂಧ ವಿರುವುದಿಲ್ಲ.

ಕೋವಿಡ್ ಮಾರ್ಗ ಸೂಚಿಯನ್ವಯ ಭಕ್ತಾದಿಗಳು ಜಾತ್ರೆಗೆ ಗುಂಪುಗುಂಪಾಗಿ ಬಾರದಂತೆ ಹಾಗೂ ಯಾವುದೇ ರೀತಿಯ ಅನಾನುಕೂಲ ಉಂಟಾಗದಂತೆ ಜಾಗೃತಿ ವಹಿಸಬೇಕೆಂದು ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಕಾರ್ಯನಿರ್ವಹಣಾಧಿಕಾರಿ ಎಚ್. ಗಂಗಾಧರಪ್ಪ ಮತ್ತು ದೇವಸ್ಥಾನದ ಆಡಳಿತ ಮಂಡಳಿಯ ಮುಖಂಡರು ತಿಳಿಸಿದ್ದಾರೆ.

# ಪಾಲಿಕೆಯಿಂದ ಶಾಲೆ ಬಿಟ್ಟ ಮಕ್ಕಳ ಸರ್ವೆ

ದಾವಣಗೆರೆ, ಮಾ. 12 - ಸರ್ಕಾರದ ಆದೇಶದಂತೆ ಮಹಾನಗರ ಪಾಲಿಕೆಯಿಂದ ನಗರದ ಎಲ್ಲಾ ವಾರ್ಡ್‌ಗಳಲ್ಲಿ 6 ರಿಂದ 14 ವರ್ಷ ವಯಸ್ಸಿನ ಶಾಲೆ ಬಿಟ್ಟ ಮಕ್ಕಳ ಸರ್ವೆ ಕಾರ್ಯ ಮಾಡುತ್ತಿದ್ದು, ಮಹಾನಗರ ಪಾಲಿಕೆಯ ಸಿಬ್ಬಂದಿ ಸರ್ವೆಗಾಗಿ ಬಂದಾಗ ಅವರಿಗೆ ಬೇಕಾದ ದಾಖಲೆಗಳಾದ ರೇಷನ್ ಕಾರ್ಡ್, ಆಧಾರ್ ಕಾರ್ಡ್‌ಗಳನ್ನು ನೀಡಿ, ಸರ್ವೆ ಕಾರ್ಯ ಯಶಸ್ವಿಯಾಗಲು ಸಹಕಾರ ನೀಡಬೇಕೆಂದು ಮಹಾನಗರ ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್, ಉಪ ಮಹಾಪೌರರಾದ ಶ್ರೀಮತಿ ಶಿಲ್ಪಾ ಜಯಪ್ರಕಾಶ್ ಮತ್ತು ಪಾಲಿಕೆ ಸದಸ್ಯರುಗಳು ಸಾರ್ವಜನಿಕರಲ್ಲಿ ಮನವಿ ಮಾಡಿರುತ್ತಾರೆ.

# ಆ.1ಕ್ಕೆ ನೀಟ್ ಪರೀಕ್ಷೆ

ನವದೆಹಲಿ, ಮಾ. 12 – ವೈದ್ಯಕೀಯ ಪ್ರವೇಶಕ್ಕಾಗಿ ನಡೆಸಲಾಗುವ ನೀಟ್ ಸ್ನಾತಕ ಪರೀಕ್ಷೆಯನ್ನು ಆಗಸ್ಟ್ 1ರಂದು ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಎನ್.ಟಿ.ಎ. ತಿಳಿಸಿದೆ.

# ಸಿಎಂ ಯಡಿಯೂರಪ್ಪಗೆ ಕೊವ್ಯಾಕ್ಸಿನ್ ಲಸಿಕೆ



ಬೆಂಗಳೂರು, ಮಾ. 12 – ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಶುಕ್ರವಾರ ಕೊವ್ಯಾಕ್ಸಿನ್ ಲಸಿಕೆ ಪಡೆದಿದ್ದಾರೆ. ದೇಶ ಹಾಗೂ ರಾಜ್ಯವನ್ನು ಕೊರೊನಾ ಮುಕ್ತ ಮಾಡಲು ಜನರು ಲಸಿಕೆ ಪಡೆಯಬೇಕೆಂದು ಅವರು ಇದೇ ಸಂದರ್ಭದಲ್ಲಿ ಕರೆ ನೀಡಿದ್ದಾರೆ. ಭಾರತ್ ಬಯೋಟೆಕ್ ಉತ್ಪಾದಿಸಿರುವ ಕೊವ್ಯಾಕ್ಸಿನ್ ಲಸಿಕೆಯನ್ನು ಯಡಿಯೂರಪ್ಪ ಅವರು ಬೆಂಗಳೂರಿನ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಆಸ್ಪತ್ರೆಯಲ್ಲಿ ಪಡೆದಿದ್ದಾರೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಕೊವ್ಯಾಕ್ಸಿನ್ ಲಸಿಕೆ ಪಡೆದಿದ್ದೇನೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಅವರ ತಾಯಿ ಸಹ ಲಸಿಕೆ ಪಡೆದಿದ್ದಾರೆ.

ಲಸಿಕೆಯಿಂದ ಯಾವುದೇ ಅಡ್ಡ ಪರಿಣಾಮವಾಗುವುದಿಲ್ಲ ಕೊರೊನಾ ತಡೆಯಲು ಬೇರೆ ದಾರಿಯೇ ಇಲ್ಲ, ಪ್ರತಿಯೊಬ್ಬರೂ ಎರಡು ಡೋಸ್ ಲಸಿಕೆ ಪಡೆಯಬೇಕೆಂದು ಕರೆ ನೀಡಿದ್ದಾರೆ.

ಇದೇ ವೇಳೆ ಆರೋಗ್ಯ ಸಚಿವ ಕೆ. ಸುಧಾಕರ್ ಸಹ ಲಸಿಕೆ ಪಡೆದಿದ್ದಾರೆ.

ನಂತರ ಮಾತನಾಡಿರುವ ಅವರು, ಲಸಿಕೆ ಪಡೆಯುವುದರಿಂದ ಕೊರೊನಾ ನಿಯಂತ್ರಿಸಬಹುದು ಹಾಗೂ ನಿವಾರಿಸಬಹುದು ಎಂದಿದ್ದಾರೆ.

ವೈದ್ಯರೂ ಆಗಿರುವ ಸುಧಾಕರ್, ಮುಂಚೂಣಿ ಕಾರ್ಯಕರ್ತರ ವಿಭಾಗದಲ್ಲಿ ಲಸಿಕೆ ಪಡೆದಿದ್ದಾರೆ ಎಂದು ಅವರ ಕಚೇರಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ನಗರದ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅಮವಾಸ್ಯೆ ಪೂಜೆ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅಮವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ದೇವರಿಗೆ ಇಂದು ರುದ್ರಾಭಿಷೇಕ, ಶ್ರೀ ಮೃತ್ಯುಂಜಯ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ನಗರ ಪಾಲಿಕೆ ನಿವೃತ್ತ ಕಂದಾಯ ಅಧಿಕಾರಿ ಶ್ರೀಮತಿ ಮತ್ತು ಶ್ರೀ ಎ.ಡಿ. ಮಂಜಪ್ಪ ಹಾಗೂ ಕುಟುಂಬದವರು ಪೂಜಾ ಕಾರ್ಯಕ್ರಮದ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಟಿ. ಬಸವನಗೌಡ ಅವರಿಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಮಾ. 12 - ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕರಾದ ಬಸವನಗೌಡ ಟಿ ಅವರು India's Trade With Singapore: An Economic Analysis ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧವನ್ನು ಮಾನ್ಯ ಮಾಡಿರುವ ದಾವಣಗೆರೆ ವಿಶ್ವವಿದ್ಯಾನಿಲಯವು ಅವರಿಗೆ ಪಿಹೆಚ್‌ಡಿ ಪದವಿ ನೀಡಿ ಗೌರವಿಸಿದೆ.

ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ.ಪಿ.ವೀರಭದ್ರಪ್ಪ ಅವರ ಮಾರ್ಗದರ್ಶನದಲ್ಲಿ ಬಸವನಗೌಡ ಟಿ. ಅವರು ಈ ಪ್ರಬಂಧವನ್ನು ಮಂಡಿಸಿದ್ದಾರೆ.

# ಮಾಗಾನಹಳ್ಳಿ ಕೋಡಿ ಕ್ಯಾಂಪ್‌ನಲ್ಲಿ ಇಂದು ಅಮವಾಸ್ಯೆ ಪೂಜೆ



ದಾವಣಗೆರೆ ಸಮೀಪದ ಮಾಗಾನಹಳ್ಳಿ, ಕಂಚಿಕೆರೆ ರಸ್ತೆ ಕೋಡಿ ಕ್ಯಾಂಪ್‌ನಲ್ಲಿರುವ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಅಮವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ 6.30 ರಿಂದ 7.30 ರವರೆಗೆ ಸ್ವಾಮಿಗೆ ಅಭಿಷೇಕ, ವಿಶೇಷ ಪೂಜೆ, ಮಹಾಮಂಗಳಾರತಿ ನಡೆಯಲಿದೆ. ನಂತರ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್‌ನ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

ನೆಲವಿಗಿ ಪರಮೇಶ್ವರಪ್ಪ ಅವರು ಅನ್ನ ಸಂತರ್ಪಣೆ ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ಜನವರಿಯಲ್ಲಿ ಕೈಗಾರಿಕಾ ಬೆಳವಣಿಗೆ ಕುಸಿತ

ನವದೆಹಲಿ, ಮಾ. 12 – ಜನವರಿಯಲ್ಲಿ ಕೈಗಾರಿಕಾ ಉತ್ಪಾದನೆ ಶೇ.1.6ರಷ್ಟು ಕುಸಿತ ಕಂಡಿದೆ. ಬಂಡವಾಳ ಸರಕು, ಉತ್ಪಾದನೆ ಹಾಗೂ ಗಣಿಗಾರಿಕೆ ವಲಯಗಳಲ್ಲಿ ಕುಸಿತವಾಗಿದೆ.

ಕಳೆದ ವರ್ಷ ಇದೇ ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ದರ ಶೇ.1.8ರಷ್ಟಿತ್ತು ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

WANTED
FULL TIME ACCOUNT ASSISTANT
With Experience in Tally Accounting
Apply with Bio-Data immediately:
SHANTALA
Chamrajpet, Davanagere
96861 95328, 96861 95323

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327




ದಾವಣಗೆರೆ ಮಹಾನಗರ ಪಾಲಿಕೆ
ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸಮೀಕ್ಷೆ
ದಾವಣಗೆರೆ ಮಹಾನಗರ ಪಾಲಿಕೆ ಸಿಬ್ಬಂದಿಯಿಂದ ಸರ್ಕಾರದ ಆದೇಶಾನುಸಾರ ನಗರದ ಎಲ್ಲಾ ವಾರ್ಡ್‌ಗಳಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು 'Karnataka H2H Children Survey App' ಮೂಲಕ ಸಮೀಕ್ಷೆ ಕಾರ್ಯ ನಡೆಸುತ್ತಿದ್ದೇವೆ.
ಮಹಾನಗರ ಪಾಲಿಕೆಯ ಸಿಬ್ಬಂದಿಯು ತಮ್ಮ ಮನೆ ಬಾಗಿಲಿಗೆ ಬಂದಾಗ ಸಮೀಕ್ಷೆ ಕಾರ್ಯದಲ್ಲಿ ಕೇಳುವ ಮಾಹಿತಿ ಒದಗಿಸಿ ಮಕ್ಕಳು ಹಾಗೂ ಮನೆಯ ಭಾವಚಿತ್ರವನ್ನು ಮೊಬೈಲ್ ಆ್ಯಪ್ ಮೂಲಕ ಪಡೆಯಲು ಅನುಮತಿಸಬೇಕಾಗಿ ನಗರದ ನಾಗರಿಕರಲ್ಲಿ ಕೋರಿದೆ.
ಈ ಕೆಳಕಂಡ ಅವಶ್ಯಕ ದಾಖಲಾತಿಗಳನ್ನು ಒದಗಿಸಿ ಸಮೀಕ್ಷೆಯನ್ನು ಯಶಸ್ವಿಗೊಳಿಸಲು ಸಹಕರಿಸುವಂತೆ ವಿನಂತಿಸುತ್ತೇವೆ.
✦ ರೇಷನ್ ಕಾರ್ಡ್ ✦ ಆಧಾರ್ ಕಾರ್ಡ್



ಸಹಿ/-
(ವಿಶ್ವನಾಥ್ ಪಿ. ಮುದಜ್ಜಿ)
ಆಯುಕ್ತರು,
ದಾವಣಗೆರೆ ಮಹಾನಗರ ಪಾಲಿಕೆ

ಸಹಿ/-
(ಎಸ್. ಟಿ. ವೀರೇಶ್)
ಮಹಾಪೌರರು,
ದಾವಣಗೆರೆ ಮಹಾನಗರ ಪಾಲಿಕೆ

ಸಹಿ/-
(ಶ್ರೀಮತಿ ಶಿಲ್ಪಾ ಜಯಪ್ರಕಾಶ್)
ಉಪ ಮಹಾಪೌರರು,
ದಾವಣಗೆರೆ ಮಹಾನಗರ ಪಾಲಿಕೆ

ಹಾಗೂ ದಾವಣಗೆರೆ ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರುಗಳು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte